# ಕೆ. ಎನ್. ಟೇಲರ್



ಡಾ. ನಾ. ದಾಮೋದರ ಶೆಟ್ಟಿ

ರಂಗಸಂಪನ್ನರು ಮಾಲಿಕೆ : ೧೮

# ಕೆ. ಎನ್. ಟೇಲರ್

ಡಾ. ನಾ. ದಾಮೋದರ ಶೆಟ್ಟಿ

ಕರ್ನಾಟಕ ನಾಟಕ ಅಕಾಡೆಮಿ
ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ
ಬೆಂಗಳೂರು - ೫೬೦ ೦೦೨

**K. N. TAYLOR** : A Monograph in Kannada by
DR. Na. Damodara Shetty,
'Prasadhana', Bharathinagar, Bejai, Mangalore - 4

Published by
B. T. Muni Rajaiah
Registrar, Karnataka Nataka Academy
Ravindra Kalakshetra, J. C. Road, Bangalore - 560 002

| | | |
|---|---|---|
| Chief Editor | : | C. G. Krishnaswamy |
| Editors | : | Dr. Siddhaling Pattanshetti |
| | | K. V. Nagaraja Murthy, |
| | | T. Raghu, Hooli Shekhar |
| First Impression | : | February, 2001 |
| Pages | : | 48 |
| Cover Design | : | Krishna Raichur |

© Author

Printed by
Manohar Printing Press, Market, Dharwad - 580 001
Ph : 0836 – 790030
Price : Rs. 30/-

•

| | | |
|---|---|---|
| **ಕೆ. ಎನ್. ಟೇಲರ್** | : | ರಂಗಸಂಪನ್ನರ ಕಿರು ಜೀವನಚರಿತ್ರೆ |
| ಲೇಖಕರು | : | ಡಾ. ನಾ. ದಾಮೋದರ ಶೆಟ್ಟಿ |
| ಪ್ರಕಾಶನ | : | ಬಿ. ಟಿ. ಮುನಿರಾಜಯ್ಯ |
| | | ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ |
| | | ರವೀಂದ್ರ ಕಲಾಕ್ಷೇತ್ರ, ಬೆಂಗಳೂರು – ೫೬೦ ೦೦೨ |
| ಪ್ರಧಾನ ಸಂಪಾದಕರು | : | ಸಿ. ಜಿ. ಕೃಷ್ಣಸ್ವಾಮಿ |
| ಸಂಪಾದಕರು | : | ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ |
| | | ಕೆ. ವಿ. ನಾಗರಾಜಮೂರ್ತಿ, |
| | | ಟಿ. ರಘು, ಹೂಲಿ ಶೇಖರ್ |
| ಪ್ರಥಮ ಮುದ್ರಣ | : | ಫೆಬ್ರುವರಿ, ೨೦೦೧ |
| ಮುದ್ರಣ | : | ಮನೋಹರ ಪ್ರಿಂಟಿಂಗ್ ಪ್ರೆಸ್, ಮಾರ್ಕೆಟ್ |
| | | ಧಾರವಾಡ - ೫೮೦ ೦೦೧ |
| ಬೆಲೆ | : | ರೂ. ೩೦/- |

# ಮೊದಲ ಮಾತು

ಕರ್ನಾಟಕ ನಾಟಕ ಅಕಾಡೆಮಿಯು ವರ್ಷದುದ್ದಕ್ಕೂ ನಾಡಿನಾದ್ಯಂತ ಹಾಗೂ ನಾಡಿನ ಹೊರಗಡೆ ರಂಗಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತ ಕನ್ನಡದ ನಾಟಕ ಕ್ಷೇತ್ರವನ್ನು ನಿರಂತರ ವಿಸ್ತರಿಸುತ್ತ ಬಂದಿದೆ. ಇಂಥ ಕಾರ್ಯಗಳ ಜೊತೆಗೆ ನಾಟಕ ಕೃತಿ, ರಂಗ ವಿಮರ್ಶೆ, ರಂಗಕರ್ಮಿಗಳ ಪರಿಚಯ ಇತ್ಯಾದಿ ಕುರಿತ ಕೃತಿಗಳನ್ನೂ ಆಗಾಗ ಪ್ರಕಟಿಸಿದೆ.

ಕನ್ನಡ ನಾಡಿನಲ್ಲಿ ಎಷ್ಟೋ ಜನ ಮಹತ್ವದ ರಂಗಸಂಪನ್ನರು ಆಗಿಹೋಗಿದ್ದಾರೆ. ಜಾನಪದ, ವೃತ್ತಿ ಮತ್ತು ಹವ್ಯಾಸಿ ಎಲ್ಲ ಕ್ಷೇತ್ರಗಳಲ್ಲಿ ರಂಗಭೂಮಿಯ ಶ್ರೇಯಸ್ಸಿಗಾಗಿ ಶ್ರಮಿಸಿದ ಅಸಂಖ್ಯ ವ್ಯಕ್ತಿಗಳ ಬದುಕಿನ ಪರಿಚಯವು ಅವರು ಗತಿಸಿದ ನಂತರ ನಿಧಾನವಾಗಿ ಇತಿಹಾಸದ ಹಿನ್ನೆಲೆಗೆ ಸಿಲುಕುತ್ತ ಹೋಗುತ್ತದೆ. ಅಂಥವರೆಲ್ಲರ ಬದುಕಿನ ಚರಿತ್ರೆಗಳು ಸುಸಂಘಟಿತವಾಗಿ ನಿರೂಪಿತಗೊಳ್ಳಬೇಕು, ಬರೆಯಲ್ಪಡಬೇಕು. ಹಾಗೆಯೇ ಈಗ ನಮ್ಮೊಡನಿರುವ ಮಹತ್ವದ ಸಾಧನೆಗೈದಿರುವ ನಟರು, ನಾಟಕಕಾರರು, ನಿರ್ದೇಶಕರು, ಹಿನ್ನೆಲೆ ರಂಗಕರ್ಮಿಗಳು ಮುಂತಾದ ರಂಗಸಂಪನ್ನ ವ್ಯಕ್ತಿಗಳನ್ನು ಕುರಿತು ಆದಷ್ಟು ಬೇಗನೆ ಕೃತಿಗಳನ್ನು ಪ್ರಕಟಿಸುವ ಮೂಲಕ ಅವರ ನೆಮ್ಮದಿಯ, ಕೀರ್ತಿಯ ಬದುಕಿಗೆ ಇನ್ನಷ್ಟು ಹೆಚ್ಚಿನ ಸುಖವನ್ನು ಕೊಡಲೆತ್ನಿಸಬೇಕೆಂದು ನಿರ್ಧರಿಸಿ, ನಾಟಕ ಅಕಾಡೆಮಿ ಈ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದೆ.

ಈ ನಿಟ್ಟಿನಲ್ಲಿ ಈಗಾಗಲೇ ೧. ಎಚ್. ಎನ್. ಹೂಗಾರ, ೨. ಬಿ. ವಿ. ಕಾರಂತ, ೩. ಮಾಸ್ಟರ್ ಹಿರಣ್ಣಯ್ಯ, ೪. ಆರ್. ನಾಗರತ್ನಮ್ಮ, ೫. ಎಚ್. ಕೆ. ಯೋಗಾನರಸಿಂಹ, ೬. ಬಿ. ಎನ್. ನಾಣಿ, ೭. ಚಿಂದೋಡಿ ಲೀಲಾ, ೮. ಆರ್. ನಾಗೇಶ್, ೯. ಎಂ. ಎಸ್. ಸತ್ಯು, ೧೦. ಪಿ. ಬಿ. ಧುತ್ತರಗಿ, ೧೧. ಹುನಗುಂದ ಬಾಬಣ್ಣ, ೧೨. ಶ್ರೀನಿವಾಸ ತಾವರಗಿರಿ, ೧೩. ಬಿ. ಆರ್. ಅರಿಷಿಣಗೋಡಿ, ೧೪. ಸುಭದ್ರಮ್ಮ ಮನ್ಸೂರು, ೧೫. ಡಿ. ದುರ್ಗಾದಾಸ, ೧೬. ರಾಜಾನಂದ, ೧೭. ಪ್ರಸನ್ನ ಅವರನ್ನು ಕುರಿತು ಪುಸ್ತಿಕೆಗಳು ಪ್ರಕಟಗೊಂಡಿವೆ.

ನಾಟಕ ಅಕಾಡೆಮಿಯ ಸದಸ್ಯರಾದ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಕೆ. ವಿ. ನಾಗರಾಜಮೂರ್ತಿ ಟಿ. ರಘು ಹಾಗೂ ಹೂಲಿ ಶೇಖರ್ ಅವರುಳ್ಳ ಸಂಪಾದಕ ಸಮಿತಿಯು ಈ ಪುಸ್ತಿಕೆಗಳನ್ನು ಚೆನ್ನಾಗಿ ಸಂಪಾದಿಸಿ ಹೊರತರುವ ಗುರುತರ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಅವರಿಗೆ ನಾಟಕ ಅಕಾಡೆಮಿಯ ಹಾಗೂ ವೈಯಕ್ತಿಕವಾಗಿ ನನ್ನ ಪರವಾಗಿ ಗೌರವ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಪುಸ್ತಿಕೆಗಳ ಪ್ರಕಟಣೆಗೆ ಒಮ್ಮತದಿಂದ ನಿರ್ಧರಿಸಿದ ಹಾಗೂ ಪ್ರಕಟಣೆಗೆ ಪೂರ್ವದಲ್ಲಿಯೇ ಕೆಲವು ಪುಸ್ತಕಗಳನ್ನು ಮಾರಾಟ ಮಾಡಲು ನೆರವಾದ ನಾಟಕ ಅಕಾಡೆಮಿಯ ಎಲ್ಲ ಸದಸ್ಯರಿಗೆ, ಕೃತಿ ರಚಿಸಿ ಕೊಟ್ಟ ಲೇಖಕರಿಗೆ, ಮುಖಪುಟ ಕಲಾವಿದರಿಗೆ ಹಾಗೂ ಮುದ್ರಕರಿಗೆ ಹಾರ್ದಿಕ ಕೃತಜ್ಞತೆಗಳು.

ಸಿ. ಜಿ. ಕೃಷ್ಣಸ್ವಾಮಿ
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

# ಸಂಪಾದಕರ ಮಾತು

ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ರಂಗಭೂಮಿಯು ವ್ಯಕ್ತಿಗಳ ಬದುಕಿನ ಎಲ್ಲ ಆಯಾಮಗಳನ್ನು ಸ್ಪರ್ಶಿಸಿ ಅವರ ಭಾವೋದ್ವೇಗ, ಭಾವೋನ್ಮಿಲನಗಳಿಗೆ ಅಭಿವ್ಯಕ್ತಿಯನ್ನು ನೀಡುವಂತೆ ಕಲಾ ಪ್ರಪಂಚದ ಉಳಿದ ಮಾಧ್ಯಮಗಳು ಮಾಡಲಾರವು. ಕರ್ನಾಟಕದ ಮೂಲೆಮೂಲೆಯಲ್ಲಿ ಜಾನಪದ, ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿ ಈ ದೃಷ್ಟಿಯಿಂದ ಹಲವಾರು ವರ್ಷಗಳಿಂದ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಪ್ರಯೋಗದಿಂದ ಪ್ರಯೋಗಕ್ಕೆ ಬದಲಾಗುತ್ತ, ಬೆಳೆಯುತ್ತ, ಹೊಸಹೊಸದಾಗುತ್ತ ಸಾಗುವ ಸಜೀವ ರಂಗಕಲೆಯನ್ನು ದಾಖಲೆಯ ಕಟ್ಟುಪಾಡಿಗೆ ಸಿಲುಕಿಸುವುದು ಬಲು ಕಷ್ಟದ ಕೆಲಸ.

ಮೊದಲಿನಿಂದಲೂ ಇತಿಹಾಸವನ್ನು ರಕ್ಷಿಸುವ ನಿಟ್ಟಿನಲ್ಲಿ ನಮ್ಮವರು ಯೋಚಿಸಿದ್ದೇ ಕಡಿಮೆ. ಹೀಗಾಗಿ ಅಸಂಖ್ಯ ರಂಗ ಕಲಾವಿದರ ಬದುಕು ಇತಿಹಾಸದ ಪುಟಗಳಲ್ಲಿ ಸೇರಿ ಕಾಲ ಕಳೆದಂತೆ ಮಸುಕಾಗುತ್ತ ಹೋದದ್ದು ಸಹಜ. ಈಗಲಾದರೂ ನಾವು ಲಭ್ಯವಿರುವ, ಲಭ್ಯವಾಗುವ ಎಲ್ಲ ವಿವರಗಳನ್ನು ಸಂಗ್ರಹಿಸಿ, ಈಗ ನಮ್ಮೊಡನಿರುವ ಕಲಾವಿದರ ಬದುಕಿನ ವರ್ಣಮಯ ನೆನಪುಗಳನ್ನು ಇತಿಹಾಸದ ಅರ್ಥಪೂರ್ಣ ಪುಟಗಳನ್ನಾಗಿ ಪರಿವರ್ತಿಸಲು ಯತ್ನಿಸುವುದು ಅಗತ್ಯವಾಗಿ ಆಗಬೇಕಾದ ಕಾರ್ಯ.

ಕರ್ನಾಟಕ ನಾಟಕ ಅಕಾಡೆಮಿಯ ಉತ್ಸಾಹಿ ಅಧ್ಯಕ್ಷರಾದ ಸಿ. ಜಿ. ಕೃಷ್ಣಸ್ವಾಮಿಯವರ ಒತ್ತಾಸೆ ಹಾಗೂ ಎಲ್ಲ ಸದಸ್ಯರ ಸಕ್ರಿಯ ಸಹಕಾರದ ಮೇರೆಗೆ ಈ ಸಲದ ಅಕಾಡೆಮಿ ಈ ಕಾರ್ಯದಲ್ಲಿ ದಿಟ್ಟ ಹೆಜ್ಜೆ ಇಟ್ಟಿದೆ. ನಮ್ಮೊಡನಿರುವ ರಂಗಕರ್ಮಿಗಳ ಬಗ್ಗೆ ರಂಗಸಂಪನ್ನರು ಎಂಬ ಮಾಲಿಕೆಯಲ್ಲಿ ಕಿರು ಜೀವನ ಚರಿತ್ರೆಯ ಕೆಲವು ಪುಸ್ತಿಕೆಗಳನ್ನು ಈಗಾಗಲೇ ಪ್ರಕಟಿಸಿದೆ.

ನಾಟಕ ಮೂಲತಃ ಪ್ರದರ್ಶಕ ಕಲೆಯಾದರೂ ಸಾಧ್ಯವಿದ್ದಷ್ಟು ಮಟ್ಟಿಗೆ ಅದನ್ನು ಸಾಹಿತ್ಯ, ಬರವಣಿಗೆ, ವಸ್ತುಸಂಗ್ರಹಣೆ, ವಿಡಿಯೋ ಚಿತ್ರೀಕರಣ, ಧ್ವನಿಮುದ್ರಣ, ನೆನಪು ಸಂಗ್ರಹ ಮುಂತಾದ ರೀತಿಯಲ್ಲಿ ದಾಖಲಿಸುವ ಪ್ರಯತ್ನ ಆಗಬೇಕಾಗಿದೆ. ನಮ್ಮ ರಂಗಭೂಮಿಯ ನಟರು, ನಾಟಕಕಾರರು, ನಿರ್ದೇಶಕರು, ರಂಗಸಂಗೀತಗಾರರು, ಹಿನ್ನೆಲೆ ರಂಗಕರ್ಮಿಗಳು ಮುಂತಾದವರು ಮಾಡಿದ ಐತಿಹಾಸಿಕ ಕೆಲಸಗಳು

ಜೀವಂತವಾಗಿ ಆಸಕ್ತ ಓದುಗರಿಗೆ, ಚರಿತ್ರೆಕಾರರಿಗೆ ಲಭಿಸುವಂತಾಗಬೇಕು. ಆಗ ಕತ್ತಲೆಗೆ ಸಂದ ನಾಟಕ ಸಾಹಿತ್ಯ ಹಾಗೂ ಪ್ರಯೋಗಗಳ ಎಷ್ಟೋ ಪುಟಗಳು ಮತ್ತೆ ಬೆಳಕಿಗೆ ಬರುವುದರಲ್ಲಿ ಸಂಶಯವಿಲ್ಲ. ಈಗ ಪ್ರಕಟವಾಗುತ್ತಿರುವ ಈ ಕೃತಿಗಳು ಆಯಾ ರಂಗಸಂಪನ್ನ ಕಲಾವಿದರ ಬಗ್ಗೆ ಕೇವಲ ದಿಕ್ಸೂಚಿಯಂತಿವೆ. ಅವರನ್ನು ಕುರಿತು ಇನ್ನೂ ಎಷ್ಟೋ ವಿಷಯಗಳು, ವಿವರಣೆಗಳು ಹೊರಬರಬೇಕು, ಪ್ರಕಟಗೊಳ್ಳಬೇಕು. ಅಂಥ ಕಾರ್ಯಕ್ಕೆ ಈಗಿನ ಈ ಪ್ರಕಟಣೆಗಳು ನಾಂದಿ ಹಾಗೂ ಪ್ರೇರಕ ರಚನೆಗಳು ಎಂಬುದನ್ನು ಮರೆಯಲಾಗದು. ಇಲ್ಲಿ ನಮೂದಿಸಲಾದ ವಿವರಗಳಿಗೆ ಹಾಗೂ ವ್ಯಕ್ತವಾದ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆಗಾರರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇದು ಕೆ. ಎನ್. ಟೇಲರ್ ಅವರನ್ನು ಕುರಿತು ಡಾ. ನಾ. ದಾಮೋದರ ಶೆಟ್ಟಿ ಅವರು ಬರೆದ ಪುಸ್ತಕ. ಕರ್ನಾಟಕದ ರಂಗಭೂಮಿ - ವೃಕ್ಷಕ್ಕೆ ಟಿಸಿಲೊಡೆದ ತುಳು ರಂಗಭೂಮಿಯ ಹೂ ಕಾಯಿ ಹಣ್ಣು ಎಲ್ಲ ಆಗಿ ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಸಮಸ್ಯೆಗಳನ್ನು ಸಾಮಾಜಿಕ ರಂಗಕ್ಕೆ ತಂದ ಕೆ. ಎನ್. ಟೇಲರ್ ಎಂದೇ ಪ್ರಸಿದ್ಧರಾಗಿರುವ ಕಡಂದಲೆ ನಾರಾಯಣ ಅವರು ಅಂಗಡಿ ಇಟ್ಟುಕೊಂಡು ಬಟ್ಟೆ ಹೊಲಿಯುವ ವೃತ್ತಿಯನ್ನೂ ಮಾಡಿದರು, ಹೊರಗೆ ಜನರೊಡನೆ ಬೆರೆತು ಬಟ್ಟೆಯ ಮೇಲೆ ಬಂದು ಕಣ್ಣಿಗೆ ಕಂಡ ಕಲಾವಿದರನ್ನು, ಕಲೆಯನ್ನು ಒಂದುಗೂಡಿಸಿ ತುಳು ಭಾಷೆಯ ಸರ್ವಾಂಗೀಣ ವಿಕಾಸಕ್ಕೆ ಆಗ ಅಗತ್ಯವಿದ್ದ ಹಿನ್ನೆಲೆಯನ್ನು ತಮಗೆ ಅರಿವಿಲ್ಲದಂತೆಯೇ ಬೆಳೆಸುತ್ತಲೂ ಬಂದರು. ಅವರು ಕಳೆದ ನಲವತ್ತು ವರ್ಷಗಳಿಗಿಂತ ಹೆಚ್ಚು ಕಾಲದಿಂದ ತಮ್ಮ 'ಶ್ರೀ ಗಣೇಶ ಸಭಾ' ಊರ್ಜಿತಗೊಳಿಸುತ್ತಲೇ ಬಂದಿದ್ದಾರೆ. ನಾಟಕಕಾರ, ನಟ, ನಿರ್ದೇಶಕ ಎಂದು ಹೆಸರಾಗಿರುವ ಕೆ. ಎನ್. ಟೇಲರ್ ಇಂದು ಎಲ್ಲ ಕನ್ನಡಿಗರ ಪ್ರೀತಿ ಪ್ರಶಸ್ತಿ ಗೌರವಗಳನ್ನು ಪಡೆದ ವಿರಳ ಕಲಾವಿದರಾಗಿದ್ದಾರೆ.

ಈ ಮಾಲಿಕೆಯ ಪುಸ್ತಕಗಳನ್ನು ಸಕಾಲದಲ್ಲಿ ಬರೆದು ಕೊಟ್ಟ ಎಲ್ಲ ಲೇಖಕರಿಗೆ ಹಾಗೂ ನಾಟಕ ಅಕಾಡೆಮಿಯ ಮೂಲಕ ಅವನ್ನು ಪ್ರಕಟಿಸುವಲ್ಲಿ ಎಲ್ಲ ರೀತಿಯಿಂದ ನೆರವಾದ ಆತ್ಮೀಯರಾದ ಸಿ. ಜಿ. ಕೆ., ಕೆ. ವಿ. ನಾಗರಾಜಮೂರ್ತಿ, ಹೂಲಿ ಶೇಖರ್, ಟಿ. ರಘು ಮತ್ತು ಬಿ. ಟಿ. ಮುನಿರಾಜಯ್ಯ ಹಾಗೂ ಮನೋಹರ ಮುದ್ರಣಾಲಯದ ರವಿ–ಚಂದ್ರು, ರಕ್ಷಾಪುಟದ ವಿನ್ಯಾಸ ಮಾಡಿಕೊಟ್ಟ ಕೃಷ್ಣ ರಾಯಚೂರು ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಬೆಂಗಳೂರು
೧೦-೨-೨೦೦೧

ಸಿದ್ಧಲಿಂಗ ಪಟ್ಟಣಶೆಟ್ಟಿ
ಸಂಪಾದಕ ಸಮಿತಿಯ ಪರವಾಗಿ

## ಪರಿವಿಡಿ


| | | |
|---|---|---|
| ೧. | ಪ್ರವೇಶ | ೯ |
| ೨. | ಹುಟ್ಟು, ಬೆಳವಣಿಗೆ | ೧೦ |
| ೩. | ರಂಗತಂಡದ ಹುಟ್ಟು | ೧೨ |
| ೪. | ಅಂಗಡಿ ಮಾರಿದ್ದು, ಕೊಂಡದ್ದು | ೧೩ |
| ೫. | ಪುನರ್ಜನ್ಮ | ೧೪ |
| ೬. | ಮದರಾಸಿ | ೧೫ |
| ೭. | ಹಾಸ್ಯ - ಗಂಭೀರ | ೧೬ |
| ೮. | ಏರ್ ಮಲ್ತಿನ ತಪ್ಪು | ೧೭ |
| ೯. | ಯಾನ್ ಸನ್ಯಾಸಿ ಆಪೆ | ೧೮ |
| ೧೦. | ತಮ್ಮಲೆ ಅರ್ವತ್ತನ ಕೋಲ | ೧೯ |
| ೧೧. | ಕಂಡನೆ - ಬುಡೆದಿ | ೨೦ |
| ೧೨. | ಶಾಂತಿ | ೨೦ |
| ೧೩. | ದಕ್ಷಿಣ ಕನ್ನಡತನ | ೨೨ |
| ೧೪. | ಟೈಲರ್ - ಟೇಲರ್ | ೨೩ |
| ೧೫. | ಕೆಮ್ತೂರು - ಚೊಯ್ಕರ ತಂಡಗಳಲ್ಲಿ | ೨೪ |
| ೧೬. | ಗಲಾಟಾ ಕಲ್ಯಾಣಂ | ೨೫ |
| ೧೭. | ಕೃತಿಗಳು - ಪ್ರತಿಕೃತಿಗಳು | ೨೮ |
| ೧೮. | ದರ್ಶನ - ಪ್ರದರ್ಶನ | ೩೦ |
| ೧೯. | ಕನ್ನಡದಲ್ಲಿ ಟೇಲರ್ | ೩೨ |
| ೨೦. | ನಾಟಕೋತ್ಸವ | ೩೩ |
| ೨೧. | ಬೆಳ್ಳಿತೆರೆಯ ಮೇಲೆ | ೩೪ |
| ೨೨. | ಅರಸಿ ಬಂದ ಮನ್ನಣೆ | ೩೬ |
| ೨೩. | ಒಲಿದವರು - ಒಲಿಯದವರು | ೩೮ |
| | ಅನುಬಂಧ | ೪೧ |

# ಪ್ರವೇಶ

ತುಳುರಂಗಭೂಮಿಗೆ ಇಂದಿನ ಅಸ್ತಿತ್ವ ಒದಗಿಬರಬೇಕಿದ್ದರೆ ಅದರ ಹಿಂದೆ ಅನೇಕ ರಂಗಕರ್ಮಿಗಳ ದುಡಿಮೆಯಿರುವುದನ್ನು ಗಣನೆಗೆ ತೆಗೆದುಕೊಳ್ಳಬೇಕು. ತುಳುರಂಗಭೂಮಿಗೆ ಬಹುದೊಡ್ಡ ಪರಂಪರೆಯೇನೂ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯ (ಉಡುಪಿ ಜಿಲ್ಲೆಯೂ ಸೇರಿದಂತೆ) ಹಳ್ಳಿಗಳಲ್ಲಿ, ಅವಿದ್ಯಾವಂತರ ನಡುವೆ ಹೆಚ್ಚು ಪ್ರಚಲಿತವಿದ್ದ ತುಳುವಿನಲ್ಲಿ ರಂಜನೆಯನ್ನು ಮೂಲದ್ರವ್ಯವಾಗಿಟ್ಟುಕೊಂಡು ಸ್ಥಳೀಯ ಸಂಘಸಂಸ್ಥೆಗಳು ನಾಟಕವಾಡುತ್ತಿದ್ದುವು.

1935ರ ಕಾಲಘಟ್ಟದಲ್ಲಿ ತುಳುರಂಗಭೂಮಿಗೆ ಚಾಲನೆ ದೊರೆತಿರುವುದಾಗಿ ಅಂದಾಜಿಸಲಾಗಿದೆ.* ಕಂಪೆನಿ ನಾಟಕಗಳ ಕೆಲಮಟ್ಟಿನ ಪ್ರಭಾವವನ್ನು ಒಳಗೊಂಡು ಹುಟ್ಟಿಕೊಂಡ ತುಳುರಂಗಭೂಮಿ ಜನಪ್ರಿಯ ಸಿನಿಮಾ ಧಾಟಿಯ ಹಾಡುಗಳನ್ನು ಹಾಡುತ್ತಾ ದ್ವಂದ್ವಾರ್ಥಮಯ ಜೋಕುಗಳನ್ನು ಸಿಡಿಸುತ್ತಾ ರಾತ್ರಿ ಬೆಳಗಾಗುವ ತನಕ ನಾಟಕವನ್ನಾಡುತ್ತಿತ್ತು. ಪ್ರೇಕ್ಷಕರು ರಾತ್ರಿಯ ಊಟ ಮುಗಿಸಿ, ಚಾಪೆ ದಿಂಬುಗಳೊಂದಿಗೆ ನಾಟಕ ನೋಡಲು ಬಂದರೆ ಮರಳಿ ಮನೆಗೆ ಹೋಗುವುದು ಬೆಳಗಾದ ಬಳಿಕವೆ. ಯಕ್ಷಗಾನದಂತೆ ಇರುಳಿಡೀ ನಾಟಕ ಆಡುವಾಗ ಅವರಲ್ಲಿ ಸಿದ್ಧ ಸ್ಕ್ರಿಪ್ಟ್ ಇರುತ್ತಿರಲಿಲ್ಲ. ಸ್ಕ್ರಿಪ್ಟ್‌ನ ಹಂದರವನ್ನಿಟ್ಟುಕೊಂಡು ಪ್ರೇಕ್ಷಕನ ಪ್ರೋತ್ಸಾಹಕ್ಕನುಗುಣವಾಗಿ ಮಾತಿಗೆ ಮಾತು ಬೆಳೆಸುತ್ತ ಆಶುಪಟುತ್ವವನ್ನು ಮೆರೆಯುವ ಪರಿಪಾಠವಿತ್ತು.

ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ, ಅಂದರೆ 1948ರ ಸುಮಾರಿಗೆ ಮದ್ಯಪಾನ ನಿರೋಧಕ್ಕೆ ಸಂಬಂಧಪಟ್ಟ ವಿವರಗಳನ್ನು ಹಳ್ಳಿಯ ಜನಸಾಮಾನ್ಯರಿಗೆ ಪರಿಣಾಮಕಾರಿಯಾಗಿ ತಿಳಿಯಪಡಿಸುವುದಕ್ಕೆ ತುಳು ನಾಟಕ ಮಾಧ್ಯಮವನ್ನು ಬಳಸಲಾಯಿತು.

40ರ ದಶಕದ ಆಸುಪಾಸಿನಲ್ಲಿ ಸತ್ಯಮಿತ್ರ ಬಂಗೇರರ ಜನಮಲ್ಲೋ ಜಾತ್ರೆ ಮಲ್ಲೋ ನಾಟಕ ಪ್ರದರ್ಶನ ಕಂಡಾಗ ತುಳುರಂಗಭೂಮಿಯಲ್ಲಿ ಒಂದು ಬಗೆಯ ಶಿಷ್ಟ ಬೆಳವಣಿಗೆ ಕಾಣತೊಡಗಿತು. ಕೆಮ್ತೂರು ದೊಡ್ಡಣ್ಣ ಶೆಟ್ಟಿ, ಕೆ. ಎನ್. ಟೇಲರ್, ಕೆ.ಬಿ. ಭಂಡಾರಿ, ರಾಮ

ಕಿರೋಡಿಯನ್, ಮಚ್ಛೇಂದ್ರನಾಥ್ ಪಾಂಡೇಶ್ವರ್, ಅತ್ತಾವರ ವಿಶ್ವನಾಥ ಮೊದಲಾದವರು ನಾಟಕ ರಚಿಸತೊಡಗಿದ್ದು ತುಳುರಂಗಭೂಮಿಯ ಬೆಳವಣಿಗೆಯ ಪ್ರಮುಖ ಕಾಲಘಟ್ಟ. ಈ ಪಿರಯೊಡುಲಾ ಬರವಾ, ಕಾಂಪರನ ಕಟಿಪಿಟಿ, ಸರ್ಪಸಂಕಲೆ ಮುಂತಾದ ಜನಪ್ರಿಯ ನಾಟಕಗಳನ್ನು ರಚಿಸಿ, ನಿರ್ದೇಶಿಸಿದ ರಾಮ ಕಿರೋಡಿಯನ್ನರು 'ಸತ್ಯ ಬತ್ತಲೆ' ನಾಟಕದ ಖ್ಯಾತಿಯ ನಾರಾಯಣ ಶೆಟ್ಟಿಯವರೊಡನೆ ಸೇರಿಕೊಂಡು ಸ್ಥಾಪಿಸಿದ ಆರ್. ಎನ್. ಮಿತ್ರ ಮಂಡಳಿ ಒಂದು ಕಡೆಯಾದರೆ ಅದಕ್ಕೂ ಮುನ್ನ ಸ್ಥಾಪಿಸಲ್ಪಟ್ಟ ಕೆ. ಎನ್. ಟೇಲರ್ ಅವರ ಶ್ರೀ ಗಣೇಶ ನಾಟಕ ಸಭಾ ಇನ್ನೊಂದು ಕಡೆ. ಅದರಲ್ಲೂ ಕೆ.ಎನ್. ಟೇಲರ್ ತುಳುರಂಗಭೂಮಿಗೆ ನೀಡಿದ ಆಯಾಮ ಹಿಂದೆಂದೂ ಕಂಡು ಕೇಳಿ ಅರಿಯದಂಥ ಮಟ್ಟದ್ದು.

## ಹುಟ್ಟು, ಬೆಳವಣಿಗೆ

ಮೂಡಬಿದಿರೆಯ ಸನಿಹದ ಕಡಂದಲೆಯಲ್ಲಿ ಸೆಪ್ಟೆಂಬರ 1, 1939 ರಲ್ಲಿ ಜನಿಸಿದ ಕಡಂದಲೆ ನಾರಾಯಣ (ಕೆ. ಎನ್. ಟೇಲರ್) ಅವರ ತಾಯಿ, ಮುತ್ತು. ತಂದೆ ಕೆ. ಚಂದು. ಮೂವರು ಗಂಡು, ಇಬ್ಬರು ಹೆಣ್ಣು ಮಕ್ಕಳಲ್ಲಿ ನಾರಾಯಣ ನಾಲ್ಕನೆಯವರು. ತಂದೆಯವರು ಮಂಗಳೂರಿನಲ್ಲಿ ಸೇನಿಟರಿ ಇನ್ಸ್‌ಪೆಕ್ಟರ್ ಆಗಿ ಉದ್ಯೋಗದಲ್ಲಿದ್ದುದರಿಂದ ಸ್ವಾತಂತ್ರ್ಯ ಪೂರ್ವದಿಂದಲೇ ವಾಸ್ತವ್ಯವನ್ನು ಮಂಗಳೂರಿನ ಮಣ್ಣಗುಡ್ಡೆಯಲ್ಲಿ ಹೂಡಿದ್ದರು. ಪ್ರಾಥಮಿಕ ವಿದ್ಯಾಭ್ಯಾಸದ ಬಳಿಕ ನಾರಾಯಣರು ನಗರದ ಕೆನರಾ ಪ್ರೌಢಶಾಲೆಯ ಉರ್ವಾ ಶಾಖೆಯ ಎಂಟನೆಯ ತರಗತಿಗೆ ಸೇರಿದರು. ತಂದೆ ತಾಯಿ ಇಬ್ಬರೂ ಭೂತಾರಾಧನೆಗೆ ಸಂಬಂಧಪಡುವ 'ಪಾಡ್ದನ'ಗಳನ್ನು ಬಲ್ಲವರಾಗಿದ್ದುದರಿಂದ ಆ ಪಾಡ್ದನಗಳನ್ನು ಕೇಳುತ್ತ ಬೆಳೆದ ನಾರಾಯಣರು ತುಳುವರ ಭೂತಾರಾಧನೆಯ ಕಲಾತ್ಮಕ ಅಂಶಗಳ ಬಗ್ಗೆ ಒಲವುಳ್ಳವರಾದರು. ಜಿಲ್ಲೆಯ ಯಕ್ಷಗಾನಕ್ಕೂ ಭೂತಾರಾಧನೆಯೇ ಮೂಲ ಎಂಬ ಮಾತಿದೆ. ನಾರಾಯಣರ ಮುಂದಿನ ರಂಗಪ್ರವೇಶಕ್ಕೆ ಅವರ ತಾಯಿ ಹಾಡುತ್ತಿದ್ದ ಪಾಡ್ದನಗಳೂ, ಮಂಗಳೂರಿನ ಸುತ್ತಮುತ್ತ ನಡೆಯುತ್ತಿದ್ದ ಯಕ್ಷಗಾನ ಪ್ರದರ್ಶನಗಳೂ ಮೂಲಸ್ಫೂರ್ತಿ ನೀಡಿರಬೇಕು.

ಆ ಕಾಲದ ಪ್ರಖ್ಯಾತ ಹರಿದಾಸರಾಗಿದ್ದ ಶೇಣಿ ಗೋಪಾಲಕೃಷ್ಣ ಭಟ್ಟರು (ಮುಂದೆ ಯಕ್ಷಗಾನದಲ್ಲೂ ಅವರು ಮಾತಿನ ಶಕ್ತಿ ನಿಮಿತ್ತವಾಗಿಯೇ ಮುಂಚೂಣಿಯ ಕಲಾವಿದರಾದರು.) ಮಂಗಳೂರಿನಲ್ಲಿ ಮೇಲಿಂದ ಮೇಲೆ ನಡೆಸುತ್ತಿದ್ದ ಹರಿಕಥಾ ಕಾಲಕ್ಷೇಪಗಳು ನಾರಾಯಣರ ಮೇಲೆ ಪರೋಕ್ಷವಾಗಿ ಪರಿಣಾಮ ಬೀರಿದುವು. ಹರಿಕಥೆಯೊಳಗೆ ಉಪಕಥೆಯನ್ನು ಹೇಳುವ ಸಂಪ್ರದಾಯವಿದ್ದು ಅದು ಬಹು ಆಕರ್ಷಕ ಅಂಶ. ಅಂಥ ಉಪಕಥೆಗಳು ಹಾಸ್ಯದ ಹೊನಲನ್ನೂ

ಕರುಣೆಯ ಕೋಡಿಯನ್ನೂ ಹರಿಸುತ್ತಿದ್ದುವು. ನಾರಾಯಣರ ನಾಟಕಗಳಲ್ಲಿ ಹಾಸ್ಯ ಕರುಣೆಗಳ ಸಾಮರಸ್ಯವನ್ನು ಕಾಣಬಹುದು. ಶೇಣಿಯವರ ಪ್ರಭಾವಕ್ಕೆ ಅವರು ಪಕ್ಕಾಗಿರಲೂಬಹುದು. ಆದರೆ ಶೇಣಿಯವರು ಅವರ ಗುರುವಲ್ಲ.

ನಾಟಕದ ಆಸಕ್ತಿ ಅದು ಹೇಗೆ ಮೈಗೂಡಿತು ಎಂಬುದಕ್ಕೆ ನಾರಾಯಣರಲ್ಲೇ ಪುಷ್ಟ ಮಾಹಿತಿ ಇಲ್ಲ. ಗಾಡ್ ಫಾದರ್ ಕಲ್ಪನೆಗೆ ಅವರು ಹೊರತು. ಎಂಟನೆಯ ತರಗತಿಯಲ್ಲಿ ಓದುತ್ತಿದ್ದಾಗ ಶಾಲಾವಾರ್ಷಿಕೋತ್ಸವಕ್ಕೆಂದು 'ಚಂದ್ರಹಾಸ' ನಾಟಕವನ್ನು ಆಯ್ದು ಅಧ್ಯಾಪಕರು ನಾರಾಯಣರಿಗೆ ಅದರಲ್ಲೊಂದು ಪಾತ್ರ ಕೊಟ್ಟಿದ್ದರು. ಖುಷಿಯ ಅಮಲಿನಲ್ಲಿದ್ದ ಬಾಲಕನಿಗೆ ಮಾರನೆಯ ದಿನ ಆಘಾತ ಕಾದಿತ್ತು. ತನಗೆ ನೀಡಿದ್ದ ಪಾತ್ರವನ್ನು ಇನ್ನೊಬ್ಬ ವಿದ್ಯಾರ್ಥಿಗೆ ಹಸ್ತಾಂತರಿಸಲಾಗಿತ್ತು. ನಾರಾಯಣರು ತನ್ನನ್ನು ತಾನೇ ಪ್ರಶ್ನಿಸಿಕೊಂಡರು : ನಟಿಸುವ ಸಾಮರ್ಥ್ಯ ತನ್ನಲಿಲ್ಲವೆ? ತಾನೆಂದೂ ನಟನಾಗಲಾರೆನೆ? ತನ್ನ ಕಣ್ಣೆದುರೇ ನಟನಾ ಚತುರರೆನಿಸಿಕೊಂಡಿದ್ದ ಕೆಯ್ಯೂರು ದೊಡ್ಡಣ್ಣ ಶೆಟ್ಟರ ಹಾಗೆ, ಅಥವಾ ಕನ್ನಡ ಹಾಸ್ಯ ಕಲಾನಿಪುಣ ರಮಾನಂದ ಚೂರ್ಯರ ಹಾಗೆ?

೧೯೪೫ರಲ್ಲಿ ತಂದೆ ತೀರಿದ ಬಳಿಕ ವಿದ್ಯಾಭ್ಯಾಸ ಅಚ್ಚುಕಟ್ಟಾಗಿ ಮುಂದುವರಿಯಲಿಲ್ಲ. ಎಂಟನೆಯ ತರಗತಿಯಲ್ಲಿದ್ದಾಗಲೇ ವಿದ್ಯಾಭ್ಯಾಸಕ್ಕೆ ವಿದಾಯ ಹೇಳಿ ತಚ್ಚಂಪೇಟೆ ಎಂಬಲ್ಲಿ ಟೈಲರ್ ಆಗಿದ್ದ ತನ್ನ ಭಾವನ ಅಂಗಡಿಯಲ್ಲಿ ಅಂಗಿಗೆ ಗುಬ್ಬಿ ಇಡುವುದಕ್ಕೆ ತೊಡಗಿದರು. ಬಹುಕ್ಷಿಪ್ರವಾಗಿಯೇ ಟೈಲರಿಂಗ್ ಕಲಿತರು. ತನ್ನ ಹದಿನೈದನೆಯ ವಯಸ್ಸಿನಲ್ಲಿ ಮಂಗಳೂರಿನ ಕಾರ್‌ಸ್ಟ್ರೀಟ್‌ನಲ್ಲಿ ಒಂದು ಹೊಲಿಗೆ ಯಂತ್ರವನ್ನಿಟ್ಟುಕೊಂಡು ಸ್ವತಂತ್ರ ಅಂಗಡಿ ಮಾಡಿಕೊಂಡರು. ತನ್ನ ಅಂಗಡಿಗೆ 'ಕೆ.ಎನ್. ಟೈಲರ್ಸ್' ಎಂಬ ಹೆಸರನ್ನಿಟ್ಟರು. ಅದರ ಪರಿಣಾಮವಾಗಿ ನಾರಾಯಣ ಎಂಬ ಹೆಸರು ಹಿಂಜರಿದು 'ಟೈಲರ್' ಎಂಬ ಹೊಸ ಹೆಸರು ಮುಂದೆ ಬಂತು. ಅದೇ ವೇಳೆಗೆ 'ಮಂಗಳೂರು ಟ್ಯುಟೋರಿಯಲ್ಸ್' ಮೂಲಕ ಮೆಟ್ರಿಕ್ ಪಾಸು ಮಾಡಿಕೊಂಡರು.

ಸ್ವಾತಂತ್ರ್ಯ - ಎಂಬುದು ಬೇರೆಯೇ ಅರ್ಥ ಪಡೆದು ಕೆ. ಎನ್. ಟೈಲರ್‌ರಲ್ಲಿ ಕೆಲಸ ಮಾಡಿತು. ಅವರ ತಂದೆಯವರು ನಾಟಕದಂತಹ ಚಟುವಟಿಕೆಗಳ ಕಡು ವಿರೋಧಿಯಾಗಿದ್ದರು. ತಂದೆಯ ನಿಧನಾನಂತರ ತಾನು ಅಂಗಡಿ ಮುಚ್ಚಿ ಮನೆಸೇರುವುದಕ್ಕೆ ನಿರ್ದಿಷ್ಟ ಕಟ್ಟುಪಾಡುಗಳನ್ನು ವಿಧಿಸುವವರಿರಲಿಲ್ಲ. ಅದು ಅವರೊಳಗಿನ ಸುಪ್ತ ಕಲಾವಿದನಿಗೆ ವಿಶೇಷ ವರದಾನವಾಯಿತು. ತನ್ನ ಹತ್ತೊಂಬತ್ತನೆಯ ವಯಸ್ಸಿನಲ್ಲಿ ಸ್ವತಂತ್ರವಾದ ರಂಗತಂಡವೊಂದನ್ನು ರೂಪಿಸುವ ಧೈರ್ಯ ತಾಳಿದರು. ತನಗೆ ಬೇಕಾದ ನಾಟಕವನ್ನಾಯ್ದು

ತನಗೆ ಬೇಕಾದ ಪಾತ್ರವನ್ನು ಮನಸ್ಸು ತೃಪ್ತವಾಗುವಂತೆ ಅಭಿನಯಿಸಬೇಕಿದ್ದರೆ ತನ್ನದೇ ತಂಡಬೇಕು. ಅಲ್ಲದೆ ಹೋದರೆ ನೀಳದೇಹದ, ಎಣ್ಣೆ ಕಪ್ಪಿನ, ಅಸಾಮಾನ್ಯವೆನ್ನಿಸದ ವ್ಯಕ್ತಿತ್ವದ ಟೈಲರ್ ತುಳುರಂಗದ ಮಹಾನ್ ನಟನಾಗುವುದು ಹೇಗೆ?

## ರಂಗತಂಡದ ಹುಟ್ಟು

ತನ್ನ ಹತ್ತೊಂಬತ್ತನೆಯ ವಯಸ್ಸಿನಲ್ಲಿ ಕೆ. ಎನ್. ಟೈಲರ್ ಮಂಗಳೂರಿನಲ್ಲಿ ತನ್ನದೇ ಆದ ನಾಟಕ ಸಂಸ್ಥೆಯನ್ನು ಹುಟ್ಟುಹಾಕಿದರು : ಶ್ರೀ ಗಣೇಶ ಸಭಾ. ೧೯೫೮ ಎಪ್ರಿಲ್ ೧೮ರಂದು ಯುಗಾದಿಯ ಪವಿತ್ರ ದಿನ. ಅಂದು ಶರವು ಮಹಾಗಣಪತಿಯ ಸನ್ನಿಧಾನದಲ್ಲಿ ಪ್ರಾರಂಭವಾದ ಈ ಸಂಸ್ಥೆಯ ಸಂಚಾಲಕರಾಗಿ, ನಟರಾಗಿ, ನಾಟಕಕಾರರಾಗಿ, ನಿರ್ದೇಶಕರಾಗಿ ಟೈಲರ್ ರಂಗಭೂಮಿಯ ಸವ್ಯಸಾಚಿಯಾದರು. ಅನೇಕ ಏಳುಬೀಳುಗಳ ನಡುವೆ ಇಂದಿಗೂ ಶ್ರೀ ಗಣೇಶ ನಾಟಕ ಸಭಾ ನಡೆದುಕೊಂಡು ಬಂದಿದೆ ಎಂಬುದಷ್ಟೇ ಸಾಕು, ಟೈಲರ್ ಅವರ ಛಲಂದಕ ಮಲ್ಲತನಕ್ಕೆ. ನಲುವತ್ತೆರಡು ವರ್ಷಗಳ ಕಾಲ ನಿರಂತರವಾಗಿ ಒಂದು ಸಂಸ್ಥೆಯನ್ನು ನಡೆಯಿಸಿಕೊಂಡು ಬರುವುದೊಂದು ಅಸಾಮಾನ್ಯ ಸಾಹಸವೆ.

ಟೈಲರ್ ತನ್ನ ರಂಗದ ಬದುಕಿಗೆ ಆಯ್ದುಕೊಂಡದ್ದು ತುಳುಮಾಧ್ಯಮ. ತುಳು ರಂಗಭೂಮಿಯ ಬಲಾಬಲಗಳ ಮಾಹಿತಿ ಅವರಿಗೆ ಶ್ರೀ ಗಣೇಶ ನಾಟಕಸಭಾ ಪ್ರಾರಂಭಿಸುವ ಹೊತ್ತಿಗೆ ಗೊತ್ತಿತ್ತು. ತುಳು ದಕ್ಷಿಣ ಕನ್ನಡ ಜಿಲ್ಲೆಯ ಉದ್ದಗಲಗಳಲ್ಲಿ ಹರಡಿಕೊಂಡಿರುವ ಪ್ರಾದೇಶಿಕ ಭಾಷೆ. ಬರಹಕ್ಕೆ ಕನ್ನಡವನ್ನು ಅವಲಂಬಿಸಿಕೊಂಡಿದೆ. ಸಾಹಿತ್ಯ ಪರಂಪರೆ ಹೇಳಿಕೊಳ್ಳುವ ಮಟ್ಟಕ್ಕಿಲ್ಲ. ಈ ದಶಕದಲ್ಲಷ್ಟೆ ತುಳುವಿಗೆ ಪ್ರತ್ಯೇಕ ಅಕಾಡೆಮಿ, ಬರವಣಿಗೆಗೆ ಉತ್ತೇಜನ ಇತ್ಯಾದಿಗಳು ದೊರಕಲು ಪ್ರಾರಂಭಗೊಂಡದ್ದು. ಟೈಲರ್ ನಾಟಕರಂಗವನ್ನು ಬಡಿದೆಬ್ಬಿಸಿದ ಕಾಲಕ್ಕೆ ತುಳುರಂಗಭೂಮಿಗೆ ಯಾವ ಪ್ರಾಧಾನ್ಯವೂ ಇರಲಿಲ್ಲ. ಟೈಲರ್ ಛಲವಾದಿ. ತುಳು ತನ್ನ ಮಾತೃಭಾಷೆ. ಜಿಲ್ಲೆಯ ಜನರ ನಾಲಿಗೆಯಲ್ಲಿ ನಲಿಯುವ ಭಾಷೆ.

ಶ್ರೀ ಗಣೇಶ ನಾಟಕ ಸಭಾ ಉದಯವಾದಾಗ ತಂಡದಲ್ಲಿ ಶ್ರೀಗಳಾದ ಬಿ.ವಿ. ಕಿರೋಡಿಯನ್, ಸೀತಾರಾಮ ಶೆಟ್ಟಿ, ಎಡ್ವರ್ಡ್ ಕ್ವಾಡ್ರಸ್, ಈಶ್ವರ ಕಂಕನಾಡಿ, ಬಿ.ಎಸ್. ರಾವ್ ಮೊದಲಾದ ಹಿರಿಕಿರಿಯ ನಟರಿದ್ದರು. ಅವರೆಲ್ಲ ಸಂಸ್ಥೆಯ ಆರಂಭ ಕಾಲದಿಂದಲೂ ಟೈಲರ್ ಅವರ ಜೊತೆಗೆ ನಿಂತವರು. ಅವರ ಪ್ರತಿ ನಾಟಕದಲ್ಲೂ ಆ

ನಟರಿಗೆ ಅವಕಾಶಗಳಿರುತ್ತಿದ್ದುವು. ಹತ್ತೊಂಬತ್ತರ ಹರೆಯದ ಟ್ಯೆಲರ್ ನಿರ್ದೇಶಿಸುವ ನಾಟಕಗಳಲ್ಲಿ ಅವರ ನಿರ್ದೇಶನಾನುಸಾರ ನಟಿಸುವುದಕ್ಕೆ ಹಿರಿಯ ನಟರುಗಳಿಗೆ ಯಾವುದೇ ಮುಜುಗರವಿರಲಿಲ್ಲ.

ಟ್ಯೆಲರ್ ನಾಟಕ ಬರೆಯಲು ಹೊರಟಾಗ ಕಣ್ಣೆದುರಿಗೆ ಕಾಣಿಸಿದ್ದು ಸಮಾಜದ ಲೋಪದೋಷಗಳೆ. ದಕ್ಷಿಣ ಕನ್ನಡ ಜಿಲ್ಲೆಯಿಂದ ಅದೆಷ್ಟೋ ಮಂದಿ ಮುಂಬಯಿಗೆ ಹೋದವರು, ನಾನಾ ಬಗೆಯ ಉದ್ಯೋಗ ಹಿಡಿದು ಅಲ್ಲೇ ನೆಲೆಸಿದವರು ಅನೇಕರಿದ್ದರೆ ಅಂಥವರಲ್ಲಿ ಕೆಲವರು ಊರಿಗೆ ಬಂದು ಸಾಕಷ್ಟು ವರದಕ್ಷಿಣೆ ಪಡೆದು ಮದುವೆಯಾಗಿ ಹುಡುಗಿಯನ್ನು ಕರೆದುಕೊಂಡು ಮುಂಬಯಿಗೆ ಹೋಗಿ ತೀಟೆ ತೀರಿದ ಬಳಿಕ ವೇಶ್ಯಾವಾಟಿಕೆಗೆ ದಬ್ಬಿದ ನಿದರ್ಶನಗಳನೇಕ. ಅಂಥ ಒಬ್ಬಾಕೆಯನ್ನು ಯುವಕನೊಬ್ಬ ವೇಶ್ಯಾವಾಟಿಕೆಯಿಂದ ಪಾರುಮಾಡಿ ತನ್ನ ಮತಕ್ಕೆ ಪರಿವರ್ತನೆ ಮಾಡಿ ವಿವಾಹವಾಗುತ್ತಾನೆ. ಇದು ಅವರ 'ಬೊಂಬಾಯಿ ಕಂಡನೆ' ನಾಟಕದ ಕಥಾವಸ್ತು. ಇದು ಒಂದು ಉದಾಹರಣೆಯಷ್ಟೆ. ಟ್ಯೆಲರ್ ಅವರ ನಾಟಕಗಳಲ್ಲಿ ಹೆಚ್ಚಿನವು ಈ ಬಗೆಯ ವಸ್ತುಗಳಿಗೆ ಮಹತ್ವವಿದೆ.

ಟ್ಯೆಲರ್ ಬರೆದ ಮೊದಲ ನಾಟಕದ ವೇಶ್ಯಾವಾಟಿಕೆಯ ಪ್ರಶ್ನೆ ಅವರಿಗೆ ತುಂಬ ಸಂಕಷ್ಟಗಳನ್ನು ತಂದುಕೊಟ್ಟಿತ್ತು. ನಾಟಕ ನಡೆಯುವ ಸ್ಥಳಗಳಲ್ಲಿ ಅದನ್ನು ಹಾಳುಗೆಡಹಲು ಹುನ್ನಾರ, ನಾಟಕದ ಬಗ್ಗೆ ಅಪಪ್ರಚಾರ, ಇತ್ಯಾದಿ ಅಪಾರ ಸಮಸ್ಯೆಗಳ ನಡುವೆಯೇ ನಾಟಕ ನಡೆಯಿತು. ಆ ಕಾಲಕ್ಕೆ ನಾಟಕದ ಬಹುದೊಡ್ಡ ಅನುಭವವಿರದಿದ್ದರೂ ದಿಟ್ಟತನದ ಹೆಜ್ಜೆಯಿಟ್ಟ ಟ್ಯೆಲರ್ ಬಗ್ಗೆ ಎಲ್ಲರಿಗೂ ಅಚ್ಚರಿ. ಟ್ಯೆಲರ್ ಬರೆದ ನಾಟಕದ ಕ್ರಾಂತಿಕಾರಿ ಅಂಶ ಪ್ರತಿರೋಧದ ನಡುವೆಯೂ ಅವರಿಗೆ ಸೂಕ್ತ ಪ್ರಚಾರವನ್ನು ಕೊಟ್ಟಿತು.

## ಅಂಗಡಿಮಾರಿದ್ದು - ಕೊಂಡದ್ದು

ಮಂಗಳೂರಿನ ರಥಬೀದಿಯಲ್ಲಿ ತನ್ನ ಹದಿನೈದನೆಯ ವಯಸ್ಸಿನಲ್ಲಿಯೇ ಅಂದರೆ ೧೯೩೫ರಲ್ಲಿ ಸ್ವತಂತ್ರವಾಗಿ ಹೊಲಿಗೆ ಅಂಗಡಿ ತೆರೆದು ದುಡಿಮೆ ಆರಂಭಿಸಿದಾಗ ಮುಂದೊಮ್ಮೆ ಅವರು ಪ್ರಖ್ಯಾತ ನಟರಾಗುವರೆಂಬುದಾಗಿ ಭಾವಿಸಿರಲಿಲ್ಲ. ಆದರೆ ಕನಸುಗಳು ಮಾತ್ರ ಅವರ ಬಗಲಿಗಿದ್ದುವು. ಆ ಕನಸುಗಳೇ 'ಟ್ಯೆಲರ್' ಆಗಿದ್ದ ಅವರನ್ನು 'ಟೇಲರ್' ಮಾಡಿದ್ದು. ಅದೊಂದು ಬೇರೆಯೇ ಕತೆ.

ರಥಬೀದಿಯಲ್ಲಿ ಟ್ಯೆಲರಿಂಗ್ ನಡೆಸುತ್ತಿದ್ದಾಗಲೇ ಅವರಿಗೆ ನಾಟಕದ ಸೋಂಕು

ತಗಲಿದ್ದು. ಶ್ರೀ ಗಣೇಶ ನಾಟಕಸಭಾದ ಆಶ್ರಯದಲ್ಲಿ ಪೌರಾಣಿಕ ನಾಟಕವನ್ನಾಡುತ್ತ ಕಂಪೆನಿ ನಾಟಕದ ಶೈಲಿಯಲ್ಲಿ ಇಲ್ಲದ ದುಡ್ಡನ್ನು ಖರ್ಚು ಮಾಡುತ್ತಿರಬೇಕಾದರೆ ಹಾಕಿದ ಹಣ ಹುಟ್ಟಲಿಲ್ಲ. ಆಗೆಲ್ಲ ನಟಿಯರ ಕೊರತೆ ಮಂಗಳೂರಿನ ತುಳು ರಂಗಭೂಮಿಯನ್ನು ವಿಪರೀತವಾಗಿ ಕಾಡುತ್ತಿತ್ತು. ನಟಿಯರಿಗಾಗಿ ಬೆಂಗಳೂರು, ಮದರಾಸು, ಮೈಸೂರು ಮುಂತಾದ ಕಡೆಗಳಿಗೆ ಅಲೆದಾಡಬೇಕಾಯಿತು. ಅವರನ್ನು ಕರೆಸಿ, ಭಾಷೆ ಬಾರದ ಅವರಿಗೆ ತುಳುವನ್ನು ಅದರ ಸ್ಪಷ್ಟ ಉಚ್ಚಾರದೊಂದಿಗೆ ಕಲಿಸಿಕೊಟ್ಟು ಅವರನ್ನು ಮಂಗಳೂರಲ್ಲಿ ಉಳಿಸಿಕೊಂಡು, ತರಬೇತಿಗೊಳಿಸಿ ನಾಟಕ ಸಿದ್ಧಗೊಳಿಸಬೇಕಾದರೆ ತಂಡ ದಿವಾಳಿಯ ದಾರಿ ಹಿಡಿಯಿತು. ಸಾಲದ ಶೂಲ ಏರುತ್ತ ಹೋಯಿತು, ಅನಿವಾರ್ಯವಾಗಿ ಅಂಗಡಿಯನ್ನು ಪರಿಚಯದ ಒಬ್ಬರಿಗೆ ಮಾರಿ ಬಂದ ಹಣದಿಂದ ತಕ್ಕಮಟ್ಟಿಗೆ ಸಾಲವನ್ನೂ ತೀರಿಸಿ ಊರು ಬಿಡಬೇಕಾಯಿತು. ಸೇರಿದ್ದು ಮದರಾಸು ನಗರವನ್ನು ೧೯೩೨ರಲ್ಲಿ.

ತಮ್ಮ ತಂಡದ ಮೂಲಕ ಕನ್ನಡ ನಾಟಕಗಳನ್ನಾಡಿಸುವ ಪ್ರಯತ್ನವನ್ನೂ ಟೈಲರ್ ಮಾಡಿದ್ದಾರೆ. ಅದರಲ್ಲೂ ಮುಖ್ಯವಾಗಿ ಐತಿಹಾಸಿಕ, ಪೌರಾಣಿಕ ನಾಟಕಗಳು. ನಾಟಕ ನಿರ್ದೇಶಕರಾದ ಗೋಪಾಲಭಟ್ಟರ ನಿರ್ದೇಶನದ ರಾಣಾಪ್ರತಾಪ, ಛತ್ರಪತಿ ಶಿವಾಜಿ ನಾಟಕಗಳು ಶ್ರೀ ಗಣೇಶ ನಾಟಕ ಸಭಾದ ಆಶ್ರಯದಲ್ಲಿ ನಡೆದವು. ಐತಿಹಾಸಿಕ ನಾಟಕಗಳಿಂದ ಪ್ರೇಕ್ಷಕರು ಹಂತಹಂತವಾಗಿ ಹಿಮ್ಮುಖ ಪಡೆಯುವ ಕಾಲವಾಗಿತ್ತದು. ನಾಟಕಗಳು ಗಲ್ಲಾಪೆಟ್ಟಿಗೆಯನ್ನು ತುಂಬುವಲ್ಲಿ ವಿಫಲವಾದುವು. ಅದರಲ್ಲೂ 'ಶಿವಾಜಿ' ನಾಟಕವು ಟೈಲರನ್ನು ಪೂರ್ತಿ ಮುಳುಗಿಸಿಬಿಟ್ಟಿತು.

ಮುಂದಿನ ಸುಮಾರು ಎರಡು ವರ್ಷಗಳ ಕಾಲ ಮದರಾಸಿನಲ್ಲಿದ್ದು ಸಿನಿಮಾರಂಗದ ಪರಿಚಯ ಹತ್ತುತ್ತಿದ್ದಂತೆಯೇ ನಾಟಕದ ಜೀವ ಒಳಗಿನಿಂದಲೇ ತುಡಿಯುತ್ತಿತ್ತು. ಟೈಲರ್ ೧೯೩೪ರಲ್ಲಿ ಊರಿಗೆ ವಾಪಸಾದರು. ತಾನು ಯಾವಾತನಿಗೆ ತನ್ನ ಅಂಗಡಿಯನ್ನು ಮಾರಿದ್ದರೋ ಅಲ್ಲಿಗೆ ಹೋಗಿ ತನ್ನ ಅಂಗಡಿಯನ್ನು ತನಗೆ ಮರಳಿಕೊಡುವಂತೆ ಕೇಳಿದರು. ಮದರಾಸಿನ ದುಡಿಮೆಯ ಚೂರುಪಾರು ಉಳಿಕೆಯನ್ನು ಆತನಿಗೆ ಕೊಟ್ಟು ಮಾರಿದ ಅಂಗಡಿಯನ್ನು ಮತ್ತೆ ಕೊಂಡುಕೊಂಡು ಟೈಲರ್ ನಂ. ೨ ಆದರು!

## ಪುನರ್ಜನ್ಮ

ಪುನರ್ಜನ್ಮ ಪಡೆದ ಟೈಲರ್ ಈ ಬಾರಿ ಶಕ್ತವಾಗಿಯೇ ರಂಗಪ್ರವೇಶ ಮಾಡಿದರು. ಪೌರಾಣಿಕ ನಾಟಕಗಳನ್ನಾಡಿಸಿ ಕೈಸುಟ್ಟುಕೊಳ್ಳುವುದರ ಬದಲು ಸಾಮಾಜಿಕ ನಾಟಕಗಳ ಕಡೆಗೆ

ಮನಸ್ಸು ಮಾಡಿದರು. ಹಗಲು ಟೈಲರಿಂಗ್, ರಾತ್ರಿ ನಾಟಕ ಬರೆಯುವುದು. ಚಿಮ್ನಿದೀಪದ ಬೆಳಕಿನಲ್ಲಿ ಸಮಾಜದ ಆಗುಹೋಗುಗಳ ಚಿತ್ರಣಗಳು ದೃಶ್ಯಗಳಾಗಿ ರೂಪುಗೊಳ್ಳತೊಡಗಿದುವು. ನಾಟಕ ತನ್ನ ಸುತ್ತಲೇ ರೂಪು ಪಡೆಯುತ್ತಲೂ ಇದ್ದುವು. ಟೈಲರ್‌ರ ಅನುಪಸ್ಥಿತಿಯ ಕಾಲದಲ್ಲಿ ಇತರರು ನಾಟಕಗಳನ್ನಾಡುವ ಪ್ರಯತ್ನಪಟ್ಟರು. ನಿರೀಕ್ಷಿತ ಫಲಿತಾಂಶ ಲಭಿಸಲಿಲ್ಲ. ಟೈಲರ್ ಬಂದದ್ದು ಅವರಿಗೆಲ್ಲ ಮರುಹುಟ್ಟು ಬಂದಂತಾಗಿತ್ತು. ಸ್ಥಾಪಕ ಅಧ್ಯಕ್ಷರಾಗಿದ್ದ ಟೈಲರ್ ಅವರ ಅನುಪಸ್ಥಿತಿಯಲ್ಲಿ ಅವರಿವರು ಅಧ್ಯಕ್ಷರಾದರೂ ಅದಕ್ಕೊಂದು ಗಟ್ಟಿತನ ಬರಲಿಲ್ಲ. ೧೯೬೩ರಿಂದ ಟೈಲರ್ ಅಧ್ಯಕ್ಷ ಪದವಿಯನ್ನು ಹಿಂದಕ್ಕೆ ಪಡೆದುಕೊಂಡು ಶಾಶ್ವತ ಅಧ್ಯಕ್ಷರಾದರು. ತಂಡಗಳು ಅನೂಚಾನವಾಗಿ ನಡೆದುಕೊಂಡು ಹೋಗುವುದಕ್ಕೆ ಮುಂದಾಲೋಚನೆಯುಳ್ಳ ಒಬ್ಬನೇ ನಾಯಕನಿರುವುದು ಅನೇಕ ವೇಳೆ ಬಹುಮುಖ್ಯವೆನಿಸಿಬಿಡುತ್ತದೆ. ಮುಂದೆ ಟೈಲರ್‌ರ ಲೇಖನಿಯಿಂದ ಪುಂಖಾನುಪುಂಖವಾಗಿ ತುಳುನಾಟಕಗಳು ಹೊರಟವು. ತಾವೇ ನಟಿಸಿ, ನಿರ್ದೇಶಿಸಿದರು. ಕಂಪೆನಿ ರಂಗಭೂಮಿಯ ಕ್ರಮದಂತೆ ತಾವೇ ಹಾಡಿದರು. ಪ್ರಸಿದ್ಧ ಸಿನಿಮಾ ಹಾಡುಗಳ ಧಾಟಿಯನ್ನು ರಂಗದ ಹಾಡುಗಳಿಗಳಿಸಿ, ಬಳಸತೊಡಗಿದರು. ಅದು ಅಪಾರ ಜನ ಮೆಚ್ಚುಗೆ ಗಳಿಸಿತು. ಅಂತೂ ತುಳು ರಂಗಭೂಮಿಗೆ ಹಾಗೂ ಟೈಲರ್‌ರಿಗೆ ಪುನರ್ಜನ್ಮ ಲಭಿಸಿತು.

## ಮದರಾಸಿ

ಹಿಂದೆಲ್ಲಾ 'ಊರು ಬಿಟ್ಟು ಹೋಗುವುದು' ಎಂದರೆ ಯಾರಲ್ಲೂ ಹೇಳದೆ ಮುಂಬಯಿಗೆ ಅಥವಾ ಮದರಾಸಿಗೆ ಹೋಗುವುದು. ಅದರಲ್ಲೂ ಏನಾದರೊಂದು ಕೆಲಸ ಹಿಡಿಯಬಯಸುವವರಾದರೆ ಮುಂಬಯಿಗೆ, ಸಿನಿಮಾದ ಹುಚ್ಚು ಹಿಡಿದವರಾದರೆ ಮದರಾಸಿಗೆ. ಟೈಲರ್ ಹೋದದ್ದು ಮದರಾಸಿಗೆ.

ಮದರಾಸಿನ 'ಮಂಗಳೂರು ಟೈಲರ್ಸ್' ಎಂಬ ಅಂಗಡಿಯಲ್ಲಿ ಕಟ್ಟರ್ ಹಾಗೂ ಟೈಲರ್ ಆಗಿ ಸೇರಿಕೊಂಡ ಟೈಲರ್ ಒಂದು ವರ್ಷಕಾಲ ಅಲ್ಲಿದ್ದರು. ಅಲ್ಲಿ ಟೈಲರ್ ಕೆಲಸದಲ್ಲಿದ್ದುದು ಅವರ ರಂಗಬದುಕಿನ ಪ್ರಮುಖ ಘಟ್ಟ. ಮದರಾಸಿನ ಫಿಲ್ಮ್ ಸೆಂಟರಿನ ಕೆಮರಾಮನ್ ದಿವಾಕರ ಶೆಟ್ಟಿ ಹಾಗೂ ವಿಕ್ರಮ್ ಸ್ಟುಡಿಯೋದಲ್ಲಿದ್ದ ಶ್ರೀಕಂಠಸ್ವಾಮಿ ಅವರ ಜೊತೆಗಿನ ನಿಕಟ ಒಡನಾಟ. ಅವರ ಸಹಾಯದಿಂದ ಸ್ಟುಡಿಯೋದ ಒಳಹೊರಗುಗಳನ್ನು ಹತ್ತಿರದಿಂದ ನೋಡುವುದು ಸಾಧ್ಯವಾಯಿತು. ಸ್ಟುಡಿಯೋದ ಒಳಪ್ರವೇಶಿಸುವುದಕ್ಕೆ ಅನೇಕ ನಿಬಂಧನೆಗಳಿದ್ದುವು. ಅದಕ್ಕೆ ಟೇಲರ್ ಒಂದು ಉಪಾಯ ಕಂಡುಕೊಂಡರು. ನೀಟಾಗಿ ಡ್ರೆಸ್ ಮಾಡಿ ಬಾಡಿಗೆಯ ಕಾರಿನಲ್ಲಿ ಜುಮ್ಮನೆ ಗೇಟಿಗೆ ತಲುಪಬೇಕಿದ್ದರೆ ಸಹಜವಾಗಿಯೇ ಬಾಗಿಲು ತೆರೆದು ದ್ವಾರಪಾಲಕ ಸೆಲ್ಯೂಟ್

ಹೊಡೆಯುತ್ತಿದ್ದ. ಅದನ್ನು ಗತ್ತಿನಲ್ಲಿಯೇ ಸ್ವೀಕರಿಸಿ ಒಳಪ್ರವೇಶಿಸುತ್ತಿದ್ದರು. ಕ್ಯಾಮರಾದೊಳಗಿನ ಕೆಲಸವನ್ನೂ ಅವರು ಹತ್ತಿರದಿಂದ ಕಂಡುಂಡರು. ಚಿತ್ರಕಥೆ ರಚನೆ, ನಿರ್ದೇಶನ ಇತ್ಯಾದಿಗಳ ಕಡೆಗೂ ಅವರು ವಿಶೇಷ ಗಮನವಿತ್ತರು. ಅವೆಲ್ಲವನ್ನು ಸಾಧ್ಯವಾದಷ್ಟೂ ಮನನ ಮಾಡಿದರು. ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸಲು ಅವಕಾಶವೂ ದೊರೆಯಿತು. ಅವುಗಳನ್ನು ಒಪ್ಪಿಕೊಂಡು ಮದ್ರಾಸಿನಲ್ಲಿಯೇ ಉಳಿಯುತ್ತಿದ್ದರೆ ಉದ್ದಕ್ಕೂ ಸಣ್ಣಪುಟ್ಟ ಪಾತ್ರಗಳನ್ನು ಮಾಡಬಹುದಿತ್ತು. ಒಮ್ಮೆ ಅಂಥ ಪಾತ್ರಗಳಿಗೆ ಜೋತುಬಿದ್ದರೆ ಮುಗಿಯಿತು ಕತೆ. ಟೈಲರ್ ಅವುಗಳನ್ನು ನಮ್ರವಾಗಿಯೇ ತಿರಸ್ಕರಿಸಿದರು.

ಕನ್ನಡ ಚಿತ್ರರಂಗ ಆಗ ಮದರಾಸಿನಲ್ಲಿ ಬೀಡು ಬಿಟ್ಟಿತ್ತು. ಅದರೊಳಗೆ ತಾನು ಸೇರಿಕೊಂಡರೂ ತನಗೆ ದೊರಕಬಹುದಾದ ಸೀಮಿತ ಅವಕಾಶಗಳನ್ನು ಮನಗಂಡು ತಾನೇ ಸ್ವತಂತ್ರವಾಗಿ ತನ್ನ ಆಡುಂಬೊಲವಾದ ತುಳುನಾಡಿನಲ್ಲಿ ತುಳುಭಾಷೆಯ ಚಿತ್ರಗಳನ್ನು ತೆಗೆದು ಅದರಲ್ಲಿ, ನಟನೂ ನಿರ್ದೇಶಕನೂ ಆಗಬೇಕೆಂದು ಕನಸು ಕಂಡರು. ಆದರೆ ಸಿನಿಮಾ ನಿರ್ಮಾಣದ ಹಿನ್ನೆಲೆಯ ಆರ್ಥಿಕ ಮೂಲಗಳನ್ನು ಒಮ್ಮಿಂದೊಮ್ಮೆಗೆ ಹುಡುಕುವುದು ಕಷ್ಟಸಾಧ್ಯವೆಂದು ಅವರಿಗೆ ಗೊತ್ತಿತ್ತು.

ತನ್ನ ಮೆಚ್ಚಿನ ರಂಗಭೂಮಿ ಅಂತೂ ಇದ್ದೇ ಇದೆಯಲ್ಲ. ಟೈಲರ್ ಒಂದೇ ವರ್ಷದ ಮದರಾಸಿನ ವನವಾಸ ಮುಗಿಸಿ ಊರಿಗೆ ಮರಳಿದರು.

## ಹಾಸ್ಯ - ಗಂಭೀರ

ಹಾಸ್ಯಪಾತ್ರಗಳೆಂದರೆ ಟೈಲರ್‌ಗೆ ಅಚ್ಚುಮೆಚ್ಚು. ತಾವು ಗಂಭೀರವಾಗಿದ್ದು ಮಿಕ್ಕವರನ್ನು ನಗಿಸಬೇಕೆಂಬುದು ಅವರ ಹಾಸ್ಯದ ಮೂಲತತ್ವ. ಅಂಗಚೇಷ್ಟೆಗಳಿಂದ ಹುಟ್ಟಿಕೊಳ್ಳುವ ಹಾಸ್ಯವಾಗಲೀ ದ್ವಂದ್ವಾರ್ಥದಿಂದ ಹುಟ್ಟಿಕೊಳ್ಳುವ ಅಪಹಾಸ್ಯವಾಗಲಿ ಅವರನ್ನು ಸಮೀಪಿಸಲಿಲ್ಲ. ಆ ಕಾಲಕ್ಕೆ ತಮಿಳು ರಂಗಭೂಮಿ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಅಲ್ಲಿನ ಹಾಸ್ಯಪಾತ್ರಗಳು, ಸನ್ನಿವೇಶಗಳು ಟೈಲರ್‌ರನ್ನು ವಿಶೇಷವಾಗಿ ಆಕರ್ಷಿಸಿದ್ದುವು. ಆ ಬಗೆಯ ಹಾಸ್ಯ ತುಳುರಂಗಭೂಮಿಗೂ ಹಿಡಿಸಬಹುದೆಂಬುದನ್ನು ಅವರು ಮನಗಂಡರು.

ಹಾಸ್ಯದ ಜೊತೆಗೆ ಗಂಭೀರ ಸನ್ನಿವೇಶವನ್ನೂ ಬೆರೆಸುವ ಕ್ರಮ ತಮಿಳು ರಂಗಭೂಮಿ ಹಾಗೂ ಚಿತ್ರರಂಗದಿಂದ ದೊರಕಿರಬೇಕು. ತಾಯ್ ನಾಗೇಶ್ ಎಂಬ ತಮಿಳಿನ ಪ್ರಖ್ಯಾತ ಹಾಸ್ಯಚಿತ್ರನಟ ಟೈಲರ್ ಅವರ ಮೇಲೆ ಒಂದಿಷ್ಟು ಪ್ರಭಾವ ಬೀರಿರಲೂಬಹುದು. (ತಾನೂ

ತಮಿಳು ಚಿತ್ರಗಳಲ್ಲಿ ಕಮೆಡಿಯನ್ ಆಗಬೇಕೆಂದು ಹಾತೊರೆದದ್ದೂ ಇದೆ.) ಅವರು ರಚಿಸಿದ ಹದಿನೇಳು ತುಳು ನಾಟಕಗಳಲ್ಲಿ ಹೆಚ್ಚಿನ ನಾಟಕಗಳು ಹಾಸ್ಯವನ್ನು ಬಿಂಬಿಸುವುದರಲ್ಲಿ ಯಶಸ್ಸು ಪಡೆದಿದ್ದರೂ ತಾಯ್‌ನಾಗೇಶ್‌ರ ನಾಣಲ್, ನೀರ್ ಕುಮಿಳಿ, ಸರ್ವರ್ ಸುಂದರಂ ತರಹದ ಕೆಲವು ಚಿತ್ರಗಳು ಅಳುವಿನ ಮೂಲಕ ನಗುವನ್ನೂ ನಗುವಿನ ಮೂಲಕ ಅಳುವನ್ನೂ ಕಟ್ಟಿಕೊಡುತ್ತಿದ್ದುದನ್ನು ಟೈಲರ್ ತುಳುವಿಗೂ ಸಮರ್ಥವಾಗಿ ರವಾನಿಸಿದ್ದಾರೆ.

ಅವರ 'ತಮ್ಮಲೆ ಅರ್ವತ್ತನ ಕೋಲ' ನಾಟಕದ ಅರುವತ್ತನ (ಅಳಿಯ) ಪಾತ್ರವಾಗಲೀ 'ಏರ್‌ಮಲ್ತಿನ ತಪ್ಪು' ನಾಟಕದ 'ದಾಸು' ಪಾತ್ರವಾಗಲೀ 'ಕಾಸ್‌ದಾಯೆ ಕಂಡನೆ', 'ಕಲ್ಜಿಗದ ವಿಶ್ವಾಮಿತ್ರಮೇನಕೆ', 'ಏರೆನ್ಲ ನಂಬೊಡ್ಚಿ' ಮುಂತಾದ ನಾಟಕಗಳ ಹಾಸ್ಯ ಪಾತ್ರಗಳಾಗಲೀ ಅವರೊಳಗಿನ ಹಾಸ್ಯಪ್ರಜ್ಞೆಯನ್ನು ಎತ್ತಿ ಹಿಡಿಯುವಲ್ಲಿ ಯಶಸ್ಸನ್ನು ಕಂಡಿವೆ. 'ಕಂಡನೆ ಬುಡೆದಿ'ಯ ಎಸ್.ಪಿ. ಪಾತ್ರದಲ್ಲಿನ ಮಾನವೀಯತೆ ಹಾಗೂ ಮಗ ಸುಧಾನ ಕಾಠಿಣ್ಯ - ಈ ಎರಡು ಬಗೆಯ ಸ್ವಭಾವವನ್ನು ದ್ವಿಪಾತ್ರದ ಅಭಿನಯದ ಮೂಲಕ ಬಿಂಬಿಸಿ ಟೈಲರ್‌ರ ಬಗೆಗಿನ ಹಾಸ್ಯ ಕಲಾವಿದನೆಂಬ ಏಕಪಕ್ಷೀಯ ಅಭಿಪ್ರಾಯದ ಪರದೆಯನ್ನು ಅವರೇ ಸರಿಸಿದ್ದಾರೆ. ಬೊಂಬಾಯಿ ಕಂಡನೆ, ಬಾಡಾಯಿದ ಬಂಗಾರ್ ಮುಂತಾದ ನಾಟಕಗಳ ಅವರ ಗಂಭೀರ ಅಭಿನಯ ಕೂಡ ಪ್ರಶಂಸೆಗೆ ಪಾತ್ರವಾಗಿವೆ.

ಬೊಂಬಯಿ ಕಂಡನೆಯ ಸಂಚಿಕಾರದ ಸಂಕುವಿನ ಪಾತ್ರ ಮಾಡಿದ ಟೈಲರ್ ಗಂಭೀರ ಪಾತ್ರಗಳಿಗೆ ಒಗ್ಗುವ ಜಾಯಮಾನದವರು ಎಂದು ಪ್ರಾರಂಭದಲ್ಲಿ ಗ್ರಹಿಸಲಾಯಿತು. ಆದರೆ ಪ್ರೇಕ್ಷಕರು ಅದರೊಳಗಿನ ಸಣ್ಣಪುಟ್ಟ ಹಾಸ್ಯದ ಪ್ರಸಂಗಗಳನ್ನು ಮೆಲುಕು ಹಾಕುತ್ತಿದ್ದ ಕ್ರಮ ನೋಡಿ ಪ್ರೇರಿತರಾದ ಟೈಲರ್, ಮುಂದೆ ಹಾಸ್ಯಕ್ಕೆ ಪ್ರಾಧಾನ್ಯ ಕೊಡಲು ತೊಡಗಿದರು. ಆದರೂ ವಿಭಿನ್ನ ಬಗೆಯ ನಾಟಕಗಳನ್ನು ಟೈಲರ್ ಬರೆದಿದ್ದಾರೆ. ಕೆಲವು ನಾಟಕಗಳನ್ನಷ್ಟೇ ಸ್ಥೂಲವಾಗಿ ಇಲ್ಲಿ ಗಮನಿಸುತ್ತಿದ್ದೇವೆ.

## ಏರ್ ಮಲ್ತಿನ ತಪ್ಪು

ಹೆತ್ತವರು ಮಾಡಿದ ತಪ್ಪಿಗೆ ಮಕ್ಕಳು ಬಲಿಯಾಗುವ ಸ್ಥಿತಿಯನ್ನು 'ಏರ್ ಮಲ್ತಿನ ತಪ್ಪು' (ಯಾರು ಮಾಡಿದ ತಪ್ಪು) ನಾಟಕದಲ್ಲಿ ಸುಂದರವಾಗಿ ಸೆರೆಹಿಡಿಯಲಾಗಿದೆ. ಜನಪ್ರಿಯ ನಾಟಕಗಳ ಶೈಲಿಯಲ್ಲಿ ಸಾಗುವ ಈ ನಾಟಕದಲ್ಲಿ ಹಾಸ್ಯದ ದೃಶ್ಯಗಳು ಹಾಸುಹೊಕ್ಕಾಗಿವೆ. ನಾಟಕದ ಒಳಗೊಂದು ನಾಟಕ ತರಬೇತಿ ನಡೆಯುತ್ತಿರುತ್ತದೆ. 'ಸತ್ಯವಾನ್ ಸಾವಿತ್ರಿ' ನಾಟಕದ

ರಂಗತರಬೇತಿಯೇ ಆ ಒಳಗಿನ ನಾಟಕ. ನಿಜನಾಟಕದ ನಾಯಕಿ ಲೀಲಾ ತನ್ನ ಬದುಕಿನ ಉದ್ದಕ್ಕೂ ನಂಬಿಕೊಂಡು ಬಂದ ಜಗ್ಗುವಿನಿಂದ ಅಗಲಬೇಕಾದ ಸನ್ನಿವೇಶ ಒದಗುವುದಕ್ಕೂ ತನ್ನ ಗಂಡನ ಶವದ ಬೆನ್ನು ಹತ್ತುವ ಸಾವಿತ್ರಿಯ ಬದುಕಿಗೂ ಇರುವ ಸಾಮ್ಯವನ್ನು ಧ್ವನಿರೂಪದಲ್ಲಿ ಅಳವಡಿಸಿಕೊಳ್ಳಲಾಗಿದೆ. ಅಲ್ಲಿ ಸತ್ಯವಾನ್ ಸತ್ತಿದ್ದರೆ, ನಾಟಕದ ಕೊನೆಯಲ್ಲಿ ಲೀಲಾ ಸಾಯುವುದೊಂದು ವಿಪರ್ಯಾಸವೆನಿಸಿದರೂ ಆಧುನಿಕ ಜಗತ್ತಿನ ಚಿಂತನೆ ಪುರಾಣದ ಕಲ್ಪನೆಗಿಂತ ಭಿನ್ನವೆನ್ನುವುದನ್ನು ರುಜುಪಡಿಸುತ್ತದೆ.

ನಾಟಕದ ಹಾಸ್ಯ, ದುಃಖದ ಸನ್ನಿವೇಶಗಳು ಪ್ರೇಕ್ಷಕರನ್ನು ಒಮ್ಮೆ ನಗು, ಒಮ್ಮೆ ಅಳು - ಗಳ ಮೂಲಕ ತಟ್ಟುತ್ತ ಅವರನ್ನು ಉದ್ದಕ್ಕೂ ಸಮತೋಲನದಲ್ಲಿ ಇರಿಸುತ್ತದೆ. ನಾಟಕದ ಕಾಲವನ್ನು ಪರಿಗಣನೆಯಲ್ಲಿಟ್ಟು ಗಮನಿಸಿದಾಗ ಈ ಬಗೆಯ ಸಮತೋಲನ ಆ ಕಾಲಕ್ಕೆ (1966) ವಿಶಿಷ್ಟವೆನಿಸುತ್ತದೆ. ನಗು ಅಳು ಮಾತುಮಾತಿನ ನಡುವೆ ಮಿಶ್ರಗೊಂಡರೆ ಪ್ರೇಕ್ಷಕರು ಯಾವುದೇ ಒಂದು ನಿರ್ದಿಷ್ಟ ಭಾವವನ್ನು ಆಸ್ವಾದಿಸುವಲ್ಲಿ ಯಶಸ್ವಿಯಾಗುವುದಿಲ್ಲ. ಗೆದ್ದವರೂ ನಗುವೇ ಗೆಲ್ಲುತ್ತದೆ. ಅಳುವಿನ ಗಂಭೀರ ಭಾಗ - ನಾಟಕದ ಮೂಲ ವಸ್ತು, ಸಾರಸತ್ವ - ತೇಲಿಹೋಗುತ್ತದೆ. ಆದರೆ ಟೈಲರ್ ಹಾಗಾಗುವುದಕ್ಕೆ 'ಏರ್‌ಮಲ್ತಿನತಪ್ಪು' ನಾಟಕದಲ್ಲಿ ಅವಕಾಶ ಕೊಡಲಿಲ್ಲ. ಗಂಭೀರ ಘಟನೆಗಳನ್ನು ಹಾಗೆಯೇ ಉಳಿಸಿಕೊಳ್ಳುವ ತಂತ್ರ ಅವರ ಎಲ್ಲ ಹಾಸ್ಯ ನಾಟಕಗಳಲ್ಲೂ ಹಾಸುಹೊಕ್ಕಾಗಿದೆ.

ನಾಟಕ ಕೊನೆ ಮುಟ್ಟುತ್ತಿದ್ದಂತೆಯೆ 'ಯೇರ್ ಮಲ್ತಿನ ತಪ್ಪು?' ಎನ್ನುವ ಸಾಲು ಬಾರಿಬಾರಿಗೂ ಪುನರುಚ್ಚಾರಗೊಳ್ಳುತ್ತಿರುತ್ತದೆ. ಅದು ತುಸು ಅತಿಯಾಯಿತೇನೋ ಅನ್ನಿಸಿದರೂ ವಸ್ತುವನ್ನು ಮನದಟ್ಟುಗೊಳಿಸುವಲ್ಲಿ ಆ ಆವರ್ತನೆ ಸಹಕಾರಿಯಾಗಿದೆ. 'ಶಾಂತಿ' ನಾಟಕದಲ್ಲಿ ಪ್ರಾರಂಭದಿಂದಲೇ 'ಎನನ್ ಬದ್‌ಕೆರೆ ಬುಡ್ಲೆ' (ನನ್ನನ್ನು ಬದುಕಲು ಬಿಡಿ) ಎಂಬ ಮಾತು ಬಾರಿಬಾರಿಗೂ ಬಂದು ಸ್ಥಾಯಿಗೊಳ್ಳುವುದೂ ಅದನ್ನೇ ಸಮರ್ಥಿಸುತ್ತದೆ. ಮುಂದಿನ ತುಳು ನಾಟಕಗಳಲ್ಲಿ ಆವರ್ತನ ಕ್ರಮವೇ ಒಂದು ಟ್ರೆಂಡ್ ಆಯಿತು!

## ಯಾನ್ ಸನ್ಯಾಸಿ ಆಪೆ

'ಯಾನ್ ಸನ್ಯಾಸಿ ಆಪೆ' ನಾಟಕದಲ್ಲಿಯೂ ಟೇಲರ್ ಬಡವ ಬಲ್ಲಿದರ ನಡುವಿನ ಅಂತರದ ಕುರಿತಾದ ಜಿಜ್ಞಾಸೆಯನ್ನು ಸೊಗಸಾಗಿಯೇ ಕೈಗೆತ್ತಿಕೊಂಡಿದ್ದಾರೆ. ತನ್ನ ಅನುಭವದ ಪರಿಧಿಯೊಳಗೆ ಕೃತಿ ರಚಿಸುವ ಟೇಲರ್ ಮಂಗಳೂರಿನಲ್ಲಿದ್ದುಕೊಂಡು ನಾಟಕವಾಡುತ್ತ ನಷ್ಟ

ಅನುಭವಿಸಿ ಮದರಾಸಿಗೆ ಪರಾರಿಯಾದರೂ ಅಲ್ಲಿಯೂ ಕಲೆಯ ಬೆನ್ನು ಹತ್ತುವುದನ್ನು ಬಿಟ್ಟು ಕೊಟ್ಟಿರಲಿಲ್ಲ ಎಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಅಲ್ಲಿ ಚಲನಚಿತ್ರರಂಗದ ನಿಕಟ ಸಂಪರ್ಕವಾದುದು ಅವರ ಯಾನ್ ಸನ್ಯಾಸಿ ಆಪೆಯ ಕತೆಯನ್ನು ಗಟ್ಟಿಗೊಳಿಸುವುದಕ್ಕೆ ನೆಪವಾಯಿತು. ಇಡಿಯ ನಾಟಕ ರಂಗಭೂಮಿ ಹಾಗೂ ಚಲನಚಿತ್ರದ ನಡುವೆ ಓಲಾಡುತ್ತ ಸಾಂಸಾರಿಕ ಬದುಕಿನ ಏರುಪೇರುಗಳ ಚಿಂತನೆಯನ್ನು ನಡೆಸುತ್ತದೆ.

ಸಾಮಾನ್ಯಳಾಗಿದ್ದ ಕಮಲಾ ಸಿನಿಮಾನಟಿ ಕಾಂಚನಾ ಆಗುತ್ತಾಳೆ. ತಾನು ಬಡತನದ ಬೇಗೆಯಲ್ಲಿದ್ದಾಗ ಬಡವನಾಗಿದ್ದ ಗೋಪಾಲನನ್ನು ಪ್ರೀತಿಸುತ್ತಾಳೆ. ತನ್ನನ್ನು 'ಚಿತ್ರನಟಿ ಕಾಂಚನಾ'ಳ ಮಟ್ಟಕ್ಕೆ ತಂದ ರಾಜನನ್ನು ಮದುವೆಯಾಗುವುದಕ್ಕೆ ಒಪ್ಪದ ಆಕೆ ಗೋಪಾಲನನ್ನೇ ಮದುವೆ ಆಗುವುದಾಗಿ ಹೇಳಿದರೂ ಕೊನೆಯಲ್ಲಿ ಶಾಸಕ ಪುತ್ರ ಕುಮಾರನನ್ನು ಮದುವೆಯಾಗುವುದು ವಿಪರ್ಯಾಸವೆನಿಸುತ್ತದೆ. ತಂದೆ ಶಾಸಕನಾದರೆ ಮಗ ತಾನು ಭಾವೀ ಶಾಸಕನೆಂದುಕೊಳ್ಳುತ್ತಾನೆ. ತಂದೆಯ ಶಾಸಕತ್ವದ ಬಲದಿಂದ ಮಗ ಅಹಂಕಾರದ ಪರಮಾವಧಿಯನ್ನು ಮೆರೆಯುತ್ತಾನೆ. ಅದಕ್ಕೆ ತಂದೆಯ ಕುಮ್ಮಕ್ಕು ಇರುತ್ತದೆ. ಅಂತೆಯೇ ಚಿತ್ರನಟಿಯರ ಮುಸುಕಿನಾಟವನ್ನು ಧ್ವನಿಪೂರ್ಣವಾಗಿ ಚಿತ್ರಿಸುವ ಪ್ರಯತ್ನ ಈ ನಾಟಕದಲ್ಲಿದೆ. ಏಳುಬೀಳುಗಳು ಮಾನವನ ಭವಿಷ್ಯದ ಮೇಲೆ ಬೀರುವ ಪರಿಣಾಮಗಳಿವು ಎಂಬುದಾಗಿ ಅದನ್ನು ಪರಿಗಣಿಸಬೇಕು.

## ತಮ್ಮಲೆ ಅರ್ವತ್ತನ ಕೋಲ

ಶ್ರೀ ಗಣೇಶ ನಾಟಕ ಸಭಾಕ್ಕೆ ಬಹಳಷ್ಟು ಹೆಸರು ತಂದುಕೊಟ್ಟ ನಾಟಕ 'ತಮ್ಮಲೆ ಅರ್ವತ್ತನ ಕೋಲ' (ಮಾವ ಅಳಿಯಂದಿರ ಕೋಲ). ಅಳಿಯಕಟ್ಟು ಪರಂಪರೆಯ ದುರ್ಲಾಭ ಪಡೆಯುವ ಮಾವ, ತನ್ನ ಖಾಸಾ ಅಳಿಯನಿಗೆ ಮಗಳನ್ನು ಕೊಟ್ಟು ಮದುವೆ ಮಾಡುವನೆಂದು ಭಾವಿಸಲಾಗಿತ್ತು. ಆದರೆ ಆಕೆ ಡಾಕ್ಟರ್ ಪದವಿ ಪಡೆದವಳು. ಈತ ಅವಿದ್ಯಾವಂತ. ಸಮಯ ಸಾಧಿಸಿ, ಅಳಿಯನನ್ನು ಪರವೂರಿಗೆ ಕಳುಹಿಸಿ, ಮಾವ ತನ್ನ ಮಗಳ ಮದುವೆಯನ್ನು ಡಾ। ಸುಧಾಕರನೊಂದಿಗೆ ಮಾಡಿಸುತ್ತಾನೆ.

ಮಾವ ಅಳಿಯ ಬದ್ಧ ವೈರಿಗಳಾಗುತ್ತಾರೆ. ಮಾವ ಒಕ್ಕಲೆಬ್ಬಿಸಿದ ಜೆರ್ಮಿ ಫೊರ್ಬ್ಸನನ್ನು ಅಳಿಯ - ಮಾವಂದಿರಿಬ್ಬರು ಚುನಾವಣೆಗೆ ನಿಂತ ವಾರ್ಡ್‌ನಲ್ಲೇ ಚುನಾವಣೆಗೆ ನಿಲ್ಲಿಸಲಾಗುತ್ತದೆ. ಜೆರ್ಮಿ ಫೊರ್ಬ್ಸ ಗೆಲ್ಲುತ್ತಾನೆ. ಆ ಮೂಲಕ ಮಾವ ಅಳಿಯಂದಿರ ಅಹಂಕಾರ ಅಡಗುತ್ತದೆ.

ಮಾವ-ಅಳಿಯಂದಿರು ಭೂತಕೋಲ ಏರ್ಪಡಿಸುವುದೂ ಅವರಿಬ್ಬರೂ ಭೂತ ಹಿಡಿದವರಂತೆ ವರ್ತಿಸುವುದೂ ಧ್ವನಿಪೂರ್ಣವಾಗಿ ಬಂದಿದೆ.

ಅಳಿಯ ಮಾವಂದಿರ ಮಧ್ಯೆ ಬಂದಿರಬಹುದಾದ ಕಲಹವು ಒಂದು ಊರಿನ ಕಲಹವಾಗಿ ಪಲ್ಲಟಗೊಳ್ಳುವ ಅಂಶವೂ ಈ ನಾಟಕದ ಧ್ವನಿಶಕ್ತಿಯಲ್ಲಿ ಅಡಕವಾಗಿದೆ.

## ಕಂಡನೆ - ಬುಡೆದಿ

'ಕಂಡನೆ - ಬುಡೆದಿ' ಟೈಲರ್ ಬರೆದ ಗಂಭೀರ ನಾಟಕಗಳಲ್ಲಿ ಪ್ರಮುಖವಾದುದು. ಅವರ ಇತರ ಕೃತಿಗಳ ಮುಖಪುಟದಲ್ಲಿ ಕಾಣಸುವ 'ಹಾಸ್ಯಪ್ರಧಾನ' ಎಂಬ ಒಕ್ಕಣೆ ಈ ನಾಟಕದ ಮುಖಪುಟದಲ್ಲಿಲ್ಲ. ನಾಟಕದ ಪ್ರಮುಖ ಪಾತ್ರಗಳಾದ ಎಸ್ಸಿ ಸುಧಾಕರ್ ಹಾಗೂ ಆಕೆಯ ಪತ್ನಿ ಸಮತಿಯರ ನಡುವೆ ಸೃಷ್ಟಿಯಾಗುವ ಬಿರುಕು ಪದರಪದರವಾಗಿ ಬಿಚ್ಚಿಕೊಳ್ಳುತ್ತ ದುರಂತದಲ್ಲಿ ಪರ್ಯವಸಾನಗೊಳ್ಳುವ ಪ್ರಕ್ರಿಯೆ ಶಕ್ತವಾಗಿ ಮೂಡಿಬಂದಿದೆ. ನಾಟಕದೊಳಗೆ ಹಾಸ್ಯ ಅನಿವಾರ್ಯವಾಗಿ ಬರಲೇಬೇಕೆಂಬುದು ಪ್ರೇಕ್ಷಕರಿಂದ ಟೈಲರ್ ಕಲಿತ ಪಾಠ. ಹಾಗಾಗಿ ಗಂಭೀರ ನಾಟಕದ ಮಧ್ಯದಲ್ಲಿ ಹಾಸ್ಯದ ಸಿಂಚನವನ್ನು ನೀಡಲು ಯತ್ನಿಸಲಾಗಿದೆಯಾದರೂ ವಸ್ತುವಿನ ಗಾಂಭೀರ್ಯ ಹಾಸ್ಯವನ್ನು ಮರೆಮಾಚಿಸುತ್ತದೆ. ಅದೇ ಕಾರಣಕ್ಕಾಗಿ ಟೇಲರ್ ಅವರ ಅತ್ಯುತ್ತಮ ನಾಟಕಗಳಲ್ಲಿ ಒಂದಾದ 'ಕಂಡನೆ - ಬುಡೆದಿ' ಪ್ರೇಕ್ಷಕರನ್ನು ಆಕರ್ಷಿಸುವಲ್ಲಿ ಅವರ ಹಾಸ್ಯನಾಟಕಗಳಷ್ಟು ಯಶಸ್ಸು ಕಾಣದೇ ಹೋಗಿರಬಹುದು.

## ಶಾಂತಿ

ಕ್ರಾಂತಿಕಾರಿ ನಾಟಕವೆಂಬುದಾಗಿ ಕರೆಯಲಾದ 'ಶಾಂತಿ' ನಾಟಕದಲ್ಲಿ ವೇಶ್ಯೆಯೊಬ್ಬಳ ಮಗಳನ್ನು ಯೋಗ್ಯನೊಬ್ಬ ಮದುವೆಯಾಗುವ ಕತೆಯಿದೆ. ಶಾಂತಿ ವೇಶ್ಯೆಯಲ್ಲ. ಆಕೆಯನ್ನು ಸಮಾಜವೇ ವೇಶ್ಯೆಯನ್ನಾಗಿಸಿದ್ದು. ಅವಳು ಹಾಗಾಗುವುದಕ್ಕೆ ಹಾಗೂ ಅಷ್ಟೆಲ್ಲ ರಾದ್ಧಾಂತಗಳಿಗೆ ಕಾರಣಕರ್ತನಾದ ವ್ಯಕ್ತಿಯನ್ನು ಬಯಲಿಗೆಳೆಯುವ ಹಾಗೂ ಸಮಾಜಕ್ಕೆ ಆ ಮೂಲಕ ಪಾಠ ಹೇಳುವ ಪ್ರಯತ್ನ ಈ ನಾಟಕದಲ್ಲಿ ಹೃದಯಸ್ಪರ್ಶಿಯಾಗಿ ಮೂಡಿದೆ. ಎಲ್ಲ ಪಾತ್ರಗಳನ್ನು ಪರಸ್ಪರ ಪೋಣಿಸುವ ಕೊಂಡಿಯಂತಿರುವ ಸದಾನಂದನ ಪಾತ್ರವನ್ನು ಟೈಲರ್ ತನಗಾಗಿಯೇ ರಚನೆ ಮಾಡಿದ್ದಾರೆಂಬುದು ಸ್ಪಷ್ಟ. ಹಾಸ್ಯಮಯವಾಗಿ ಪ್ರಾರಂಭಗೊಳ್ಳುವ ಸದಾನಂದನ ಪಾತ್ರ ಕೊನೆಯಲ್ಲಿ ಗಂಭೀರ ನೆಲೆಯೊಂದನ್ನು ಕಂಡುಕೊಳ್ಳುತ್ತದೆ. ಎರಡೂ ಧ್ರುವಗಳ ನಡುವೆ

ಲೀಲಾಜಾಲವಾಗಿ ವಿಹರಿಸುವ ಶಕ್ತಿ ಟೈಲರ್ ಅವರಲ್ಲಿರುವುದರಿಂದಲೇ ಅಂತಹ ಪಾತ್ರ ನಿರ್ಮಾಣವೂ ಸಾಧ್ಯವಾಗುತ್ತದೆ.

ಕ್ಷಿಪ್ರಗತಿಯಲ್ಲಿ ಸಂಭಾಷಣೆಯ ಸಂಘರ್ಷಗಳು ಮೂಡುತ್ತಾ ಮೊಳಗುತ್ತಾ ನೋಡು ನೋಡುತ್ತಿದ್ದಂತೆಯೇ ಪರಾಕಾಷ್ಠೆಯನ್ನು ತಲುಪಿಬಿಡುತ್ತವೆ. ಟೇಲರ್ ತಮ್ಮ ಸಂಭಾಷಣೆಯಲ್ಲಿ ಮೊನಚನ್ನು ತರುವ ಕ್ರಮ, ಗಂಭೀರ ಸನ್ನಿವೇಶಗಳನ್ನು ನಿರ್ಮಿಸುವಾಗ ಪ್ರತಿ ಹಂತದಲ್ಲೂ ಸಂಘರ್ಷಗಳನ್ನು ಕಟ್ಟಿಕೊಡುವ ಪರಿ ಉನ್ನತ ಮಟ್ಟದ್ದಾಗಿದೆ.

ಭವಾನಿ ಶಾಂತಿಯರ ಈ ಸಂಭಾಷಣೆ ಅಂತಹ ಸಂಘರ್ಷ ಹಾಗೂ ಆ ಮೂಲಕ ಕಂಡುಕೊಳ್ಳುವ ಪರಾಕಾಷ್ಠೆಗೆ ಒಂದು ಉದಾಹರಣೆ :

ಭವಾ : [ಪ್ರವೇಶಿಸಿ] ಶಾಂತೀ.... ಶಾಂತೀ

ಶಾಂತಿ : [ಹೊರಗೆ ಬಂದು, ಭವಾನಿಯನ್ನು ನೋಡಿ ಹಾಗೇ ನಿಂತು ಬಿಡುತ್ತಾಳೆ.]

ಭವಾ : [ಶಾಂತಿಯನ್ನು ಆಪಾದಮಸ್ತಕವಾಗಿ ನೋಡಿ] ಶಾಂತಿ ಪಂಡ ಈಯೆನಾ?

ಶಾಂತಿ : ಅಂದಮ್ಮ. ಯೀರ್ ಭವಾನ್ಯಮ್ಮ ತ್ತಾ? ಕುಲ್ಲುಲೆ, ದಾಯೆ ಉಂತೊಂದರ್, ಕುಲ್ಲುಲೆ, ಯಾನ್ ಪೇರ್ ಪತೊಂದು ಬರ್ಪೆ.

ಭವಾ : [ತಡೆದು] ಪಾತೆರ ಮಾತ ಪತಿವ್ರತೆನ, ಕಸಬು ಮಾತ್ರ ಸೂಳೆನ, ಯೆನ್ನ ಕಂಡನೆ ಅತ್ತಾಂಡೆ ಊರುಡು ಬೇತೆ ಆಂಜೊವು ಏರ್ಲಾ ತಿಕ್ಕ್‌ಜೆರ ನಿಕ್ಕ್?

ಶಾಂತಿ : ಸ್ತ್ರೀ ಸಮಾಜೊನು ಸುಧರಿಪುನ ಇರೆ ಬಾಯಿಡ್ದ್ ಈ ಪಾತೆರೊಲು ಬರಿಯೆರ ಬಲ್ಲಿ ಅಮ್ಮಾ, ಜಾತಿಡ್ ನಮ ಇರ್ವೆರ್ಲ ಪೊಂಜೊವುಲೆ. ಜನ್ಮೊಗು ಬತ್ತಿಬೊಕ್ಕ ನಂಕ್ ಸೂಳೆಲು, ಸುಬಗೆರ್ ಪನ್ಪಿನ ಪಟ್ಟ ಬರ್ಪಿನಿ, ಅವು ಊರುದಕ್ಲು ನಂಕ್ ಕೊರ್ಪಿನಿ. ಯಾನ್ ನಿಜವಾಯಿನ  ಸೂಳೆ ಆತ್‌ಂಡ, ಇರೆನ ಸುಖ ಸಂಪತ್ತ್‌ನ್ ಸೂರೆ ಮಲ್ಪುವೆ. ಅಮ್ಮಾ, ಎಂಕುಲು ಯೆಂಚ ಸೂಳೆಲಾಪ, ಯೆಂಕಲೆನ್ ಏರ್ ಈ ಕಸಬುಗು ಜಪ್ಪಾವೆರ್ ಪನ್ಪಿನೆನ್ ಯೀರ್ ನಾಡ್‌ಪತ್ತ್‌ಲೆ.

ಭವಾ : ಯೆನ್ನ ಸಂಪತ್ತ್ ಸೌಭಾಗ್ಯೊನು ಸೂರೆ ಮಲ್ತ್‌ಜಿ ಪನ್ಪ, ಎನ್ನ ಕಂಡನೆ ನಿಕ್ಕ್ ಖರ್ಚಿಗ್ ಕೊರ್ದು ನಿನ ಕಯ್ಟುಲ್ ಬರೊಂದು ಪೋವೊಂದು ಇಜ್ಜೆರಾ? ನಿಕಲೆಡ್ಡಾತ್ರ ಯೆಂಕ್‌ಲ್ನ ಕಂಡನ್ಮಲ್ಲು ಮಾತಾ ಹಾಳಾವರೆ ಕಾರಣ.

ಶಾಂತಿ : ಯೆಂಕಲೆಡ್ಡಾತ್ರತ್ತಮ್ಮಾ, ನಿಕಲೆಡ್ಡಾತ್ರ, ಇರೆಡ್ಡಾತ್ರ, ಕೈ ಪತ್‌ದಿ ಕಂಡನ್ಮನ್ ಇಲ್ಲಡ್ ಬುಡ್ದು, ಊರ್ದ ಆಂಜೊವ್ಲೆ ಪೊಟ್ಟುಗು ಊರು ತಿರ್ಗೊಂದುಪ್ಪುನ ಇರೆಡ್ಡಾತ್ರ, ಬುದ್ಧಿ ಪಂಡಿ ಪೆಟ್ಟ್‌ಗ್ ಕಂಡನ್ಮನ್ ಬುಡ್ಪೆ ಪನ್ಪಿನ ಇರೆಡ್ಡಾತ್ರ.

ಭವಾ : ಹೋಟೆಲ್‌ಡ್ ತಿನ್ಪಿ ವಸ್ತು ಮಾರುನೆಡ್ದಾತ್ರ ತಿನ್ಪಿನಕ್ಲು ನಾಡೊಂದು ಬರ್ಪೆರ್. ಅವು ಮಾರಿಯೆರೆ ದೀಪಿನಕ್‌ಲ್ನ ತಪ್ಪು.

ಶಾಂತಿ : ಇಲ್ಲಡ್ ತಿನ್ನಿಯರೆ ಇತ್ತ್‌ದ್‌ಲ ಮಲ್ತ್ ಕೊರ್ಪಿನ ಜನ ಇಜ್ಜಾಂದೆ, ಹೊಟೆಲ್‌ಗ್ ಬರೊಂದುಲ್ಲೆರೇ, ಅವು ಅಕಲ್ನ ತಪ್ಪತ್ತ್, ಇಲ್ಲಡಿತ್ತಿನಕಲ್ನ, ನಿಕಲ್ನ ತಪ್ಪು.

ಭವಾ : ಶಾಂತಿ (ಗಂಭೀರವಾಗಿ) ಉಂತ್ತುದಿ ಆಜ್ಜೆಡೆ, ನಿನನ್ ಊರು ಬುಡ್ಪಾವುನ ತೂಪನ ?

ಶಾಂತಿ : ಯೀರ್ ನಿಜವಾಯ್ನ ಪತಿವ್ರತೆ ಆಂಡ, ಯೀರ್ ನಿಜವಾಯ್ನ ಸಮಾಜ ಸುಧಾರಕೆದಿ ಆಂಡ, ಯೆನ್ನಲೆಕ್ಕನೆ ಪೊರ್ತಿ ಪೊಣ್ಣು ಪೊಂಜೊವಾಂಡ, ಯೆನನ್ ಈ ಗತಿಕ್, ಸೂಳೆ ಪನ್ಪಿನ ಸ್ಥಿತಿಕ್ ಕೊನೊಬಯ್ದಿನಾಯನ್ ಈ ಊರುಡ್ದು ಗಿಡಪಾವರಾ?

ಭವಾನಿ : ಪನ್ಲೇ, ಈ ಸ್ಥಿತಿಕ್ ಕೊನೊಬಯ್ದಿನಾಯೆ ಯೇರ್ ?

ಶಾಂತಿ : ಬೆಂಗ್ಳೂರುಡುಪ್ಪುನ - ಇರೆ ಮೆಗ್ಗ್ಯೆ ಶಂಕರ್.

ಭವಾ : (ಆಶ್ಚರ್ಯದಿಂದ) ಶಾಂತೀ!.

## ದಕ್ಷಿಣ ಕನ್ನಡತನ

ಟೈಲರ್‌ರ ನಾಟಕಗಳಲ್ಲಿ ದಕ್ಷಿಣಕನ್ನಡವನ್ನು ಚಿತ್ರಿಸುವ ಪ್ರಯತ್ನವಿದೆ. ದಕ್ಷಿಣಕನ್ನಡದಲ್ಲಿ ಪ್ರಮುಖ ಆಡುಭಾಷೆಯಾದ ತುಳುವಿನಲ್ಲಿ ನಾಟಕ ರಚಿಸಿ ಪ್ರದರ್ಶಿಸುವಾಗ ಅಲ್ಲಿನ ಪರಿಸರವನ್ನು ಕಟ್ಟಿಕೊಡುವುದು ಅತಿ ಅಗತ್ಯ. ನಾಟಕದ ಪ್ರದರ್ಶನ ದಕ್ಷಿಣ ಕನ್ನಡೇತರ ಪ್ರದೇಶಗಳಲ್ಲಿ ಆಗುವಾಗಲೂ ಈ ಪ್ರದೇಶದಿಂದ ವಲಸೆಹೋಗಿ ಬೇರೆ ಬೇರೆ ಕಡೆಗಳಲ್ಲಿ ನೆಲೆಸಿದ ತುಳುವರೇ ಅವರ ನಾಟಕಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನೋಡುವರೆಂಬ ಪ್ರಜ್ಞೆ ಅವರಿಗೆ ಚೆನ್ನಾಗಿಯೇ ಇದೆ. ಮಾತ್ರವಲ್ಲದೆ ಇಲ್ಲಿನ ಹಂಪನಕಟ್ಟೆಯಾಗಲೀ ಇಲ್ಲಿನ ಮಲ್ಲಿಗೆಯಾಗಲೀ ಗುತ್ತಿನ ಮನೆಯಾಗಲೀ ಮಾತಿನ ಮೂಲಕ ಹರಡಿದಾಗ ಪ್ರೇಕ್ಷಕರು ತಮ್ಮ ತವರೂರಿನ ಘಟನೆ ಅದೆಂದು ಸಹಜವಾಗಿಯೇ ಊಹಿಸುತ್ತಾರೆ. ಹಾಗೂ ಆ ಘಟನೆಗಳೊಂದಿಗೆ ತಾದಾತ್ಮ್ಯಗೊಳ್ಳಲು ಪ್ರಯತ್ನಿಸುತ್ತಾರೆ. ಆದ್ದರಿಂದ ಪ್ರಾದೇಶಿಕವೆನ್ನಿಸುವ ಒಂದು ಭಾಷೆಯ ಕೃತಿ ಸಾರ್ವತ್ರಿಕ ಅನನ್ಯತೆಯನ್ನು ಕಂಡುಕೊಳ್ಳುವುದು ಸಾಧ್ಯವಾಗುತ್ತದೆ. 'ತಮ್ಮಲೆ ಅರ್ವತ್ತನ ಕೋಲ' ಇದಕ್ಕೊಂದು ಉತ್ತಮ ನಿದರ್ಶನ. ಭೂತಾರಾಧನೆಯ ಪ್ರದರ್ಶನ ಸಹಜವಾಗಿಯೇ ಕಂಗೊಳಿಸಲೆಂದು ನಾಟಕ ಆಗುವ ಕಡೆಗೆಲ್ಲ ನಲಿಕೆಯವರನ್ನು ಕರೆದೊಯ್ದು ಅವರಿಂದಲೇ ಭೂತಕಟ್ಟಿಸುತ್ತಿದ್ದರು. ಆರಾಧನಾ ಪ್ರಕಾರವೊಂದನ್ನು ನಾಟಕದ ಅಂಗವಾಗಿ ಬಳಸಬಹುದೇ ಎಂಬುದು ಬೇರೆಯೇ ಚರ್ಚಾವಿಷಯ. ತಮ್ಮಲೆ ಅರ್ವತ್ತನ ಕೋಲದಲ್ಲಿ, ಕೋಲ, ಕೋಳಿಕಟ್ಟ - ಇತ್ಯಾದಿಗಳು ಪ್ರಾದೇಶಿಕ ಸಂಸ್ಕೃತಿಯ ಭಾಗವಾಗಿಯೇ ಬರುತ್ತವೆ.

ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿಯ ಬದುಕು, ಬಡತನ - ಸಿರಿತನಗಳ ತರತಮಗಳು, ಜಮೀನ್ದಾರರ ದಬ್ಬಾಳಿಕೆ, ಅಳಿಯಕಟ್ಟು ಸಂತಾನದ ಒಳಿತು ಕೆಡುಕುಗಳು - ಇತ್ಯಾದಿಗಳನ್ನು ಟೈಲರ್ ತಮ್ಮ ನಾಟಕಗಳಲ್ಲಿ ಆಳವಾದ ಅಧ್ಯಯನದ ಸಹಾಯದೊಂದಿಗೆ ಅಳವಡಿಸಿಕೊಂಡಿದ್ದಾರೆ.

ಹಳ್ಳಿಯ ಬದುಕಿನ ಒಳಗೆ ನಗರದ ನಾಗರಿಕತೆ ಪ್ರವೇಶಿಸುವ ಹಂತಗಳನ್ನು ಕೂಡ ಟೈಲರ್ ಸೊಗಸಾಗಿ ನಿರೂಪಿಸಿದ್ದಾರೆ.

## ಟೈಲರ್ - ಟೇಲರ್

ಶ್ರೀ ಗಣೇಶ ನಾಟಕ ಸಭಾ ಸಂಸ್ಥೆಯ ಸಕಲ ಜವಾಬ್ದಾರಿಗಳನ್ನು ಹೊತ್ತುಕೊಂಡ ಟೈಲರ್ ಅವರು ರಾಜ್ಯದ ವಿವಿಧ ಭಾಗಗಳಲ್ಲಿ ನಾಟಕಗಳನ್ನು ಗೊತ್ತು ಮಾಡಿಕೊಂಡು ಬಂದು ತರಬೇತಿಯನ್ನು ಮತ್ತೊಮ್ಮೆ ಗಟ್ಟಿಪಡಿಸಿ ತಂಡವನ್ನು ಹೊರಡಿಸುತ್ತಿದ್ದುದು ವಾಡಿಕೆ. ಮಹಾರಾಷ್ಟ್ರದ ಪ್ರಮುಖ ನಗರಗಳಾದ ಮುಂಬಯಿ, ಪೂನಾ, ಮೀರಜ್, ಕೊಲ್ಹಾಪುರ, ನಾಸಿಕ, ಸಾಂಗ್ಲಿ ಮುಂತಾದ ಕಡೆಗಳಲ್ಲಿ ಟೈಲರ್‌ರಿಗೆ ಅಪಾರ ಅಭಿಮಾನಿಗಳಿದ್ದರು. ಹೊಸ ನಾಟಕ ಸಿದ್ಧವಾಗುತ್ತಲೇ ಆ ಎಲ್ಲಾ ಕಡೆಗೂ ತಂಡ ಹೊರಡಲು ಸಿದ್ಧವಾಗುತ್ತಿತ್ತು.

ಹಾಗೆಯೇ ಕೇರಳ, ಗೋವಾ, ಚೆನ್ನೈ ಹಾಗೂ ಕರ್ನಾಟಕದಲ್ಲಿ ಅಪಾರ ಸಂಖ್ಯೆಯ ಕೇಂದ್ರಗಳು ಟೈಲರ್ ತಂಡದ ನಾಟಕಗಳ ರುಚಿಯನ್ನು ಕಂಡುಂಡಿವೆ. ಟೈಲರ್ ತಂಡದ ಕೀರ್ತಿ ಗಲ್ಫ್ ರಾಜ್ಯಗಳಲ್ಲೂ ಹರಡಿದ್ದು ಯು.ಎ.ಇ., ದುಬಾಯಿ ಮುಂತಾದ ಕಡೆಗಳಲ್ಲಿ ನಾಟಕ ಪ್ರದರ್ಶನ ಸನ್ಮಾನಾದಿಗಳು ನಡೆದಿವೆ. ಐದು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯ ಪ್ರದರ್ಶನಗಳನ್ನು ನೀಡಿರುವ ಟೈಲರ್ ಅವರ ತಂಡಗಳಲ್ಲಿ ಸುಮಾರು ೨೦೦ಕ್ಕೂ ಹೆಚ್ಚಿನ ಪುರುಷರು, ೬೦ಕ್ಕೂ ಹೆಚ್ಚು ಸ್ತ್ರೀಯರು ನಟಿಸಿದ್ದಾರೆ. ಹಾಗೂ ಮೂವತ್ತಕ್ಕೂ ಹೆಚ್ಚು ಹಾರ್ಮೋನಿಯಮ್ ಕಲಾವಿದರು ಬಂದು ಹೋಗಿದ್ದಾರೆ. ಆ ದಿನಗಳ ನಾಟಕದಲ್ಲಿ ಹಾರ್ಮೋನಿಯಂ ಮಹತ್ತರ ಸ್ಥಾನ ಪಡೆದಿತ್ತು. ಕಲಾವಿದರು ಒಂದೇ ತಂಡದಲ್ಲಿ ಶಾಶ್ವತವಾಗಿ ನಿಲ್ಲದ್ದರಿಂದ ವಿವಿಧ ಬಗೆಯ ಬದಲಾವಣೆ ಅನಿವಾರ್ಯವಾಗಿತ್ತು. ಆದರೆ ಟೈಲರ್ ಕರೆದರೆ ಯಾವ ಕಲಾವಿದನೂ ಬರುವುದಿಲ್ಲ ಎನ್ನುತ್ತಿರಲಿಲ್ಲ. ದಕ್ಷಿಣ ಕನ್ನಡದ ಹವ್ಯಾಸಿ ರಂಗಭೂಮಿಯಲ್ಲಿ ಸಂಭಾವನೆ ಕೊಡುವ ಕ್ರಮ ಜ್ಯಾರಿಯಲ್ಲಿರಲಿಲ್ಲ. ಟೈಲರ್‌ಗೆ ಇದು ಸರಿಬರಲಿಲ್ಲ. ಪ್ರತಿ ಕಲಾವಿದನಿಗೂ ಸಂಭಾವನೆ ಕೊಡುವ ಕ್ರಮವನ್ನು ದಕ್ಷಿಣಕನ್ನಡದಲ್ಲಿ ಟೈಲರ್‌ರೇ ಮೊದಲು ಪ್ರಾರಂಭ ಮಾಡಿರಬೇಕು. ಕಂಪೆನಿ ನಾಟಕಗಳಲ್ಲಿ ಮಾತ್ರ ಸಂಬಳ ಕೊಡುವ ಕ್ರಮ ಅಲ್ಲಿಯ ತನಕ ನಡೆದು ಬಂದಿತ್ತು.

ಒಂದೊಮ್ಮೆ ಕರ್ನಾಟಕ ಚಲನಚಿತ್ರಗಳಲ್ಲಿ ವಿರಾಜಮಾನರಾಗಿದ್ದ ಜಯಮಾಲ, ಹೇಮಲತಾ, ಮಮತಾ ಶೆಣೈ, ವಿಜಯಕಲಾ ಮುಂತಾದವರು ಟೈಲರ್ ಅವರ ಗರಡಿಯಲ್ಲಿ ಪಳಗಿ ಖ್ಯಾತಿಗೇರಿದವರು. ಎಲ್ಲರಿಗೂ ಟೈಲರ್ ಆಗಿದ್ದ ಕೆ. ಎನ್. ಟೈಲರ್ ಒಂದು ಮುಂಜಾನೆ ಕರ್ನಾಟಕದ ರಾಜಧಾನಿಯಲ್ಲೇ 'ಟೇಲರ್' ಎಂಬ ಹೆಸರಿಗೆ ಭಾಜನರಾದರು. ಬೆಂಗಳೂರಿನ ಗಲ್ಲಿಗಲ್ಲಿಗಳಲ್ಲಿ 'ತಮ್ಮಲೆ ಅರ್ವತ್ತನ ಕೋಲ' ಪ್ರದರ್ಶನ ಕಂಡಿತು. ಬೆಂಗಳೂರಿನ ಇಂಗ್ಲಿಷ್ ಪತ್ರಿಕೆಯೊಂದು ಅವರನ್ನು 'ಕಾಮೆಡಿಕಿಂಗ್' ಎಂದು ಕರೆಯುತ್ತಾ ನಾಟಕದ ಲವಲವಿಕೆಯ ಉನ್ನತ ಮಟ್ಟವನ್ನು ಕಾಯ್ದುಕೊಂಡದ್ದನ್ನು ಪ್ರಶಂಸಿಸುತ್ತಾ ಲೇಖನದ ಉದ್ದಕ್ಕೂ ಅವರನ್ನು ಟೇಲರ್ (Tailor ಅಲ್ಲ - Taylor) ಎಂಬುದಾಗಿ ಕರೆದರು. ತುಳು ರಂಗಭೂಮಿಗೆ ಎಲಿಜಬೇತ್ ಟೇಲರ್‌ರ ಅಭಿನಯ ಸಾಮರ್ಥ್ಯವನ್ನು ನೆನಪಿಗೆ ತಂದುಕೊಡುವ ಪ್ರಯತ್ನ ಮಾಡಿದರು. ಟೈಲರ್ ಹೋಗಿ ಟೇಲರ್ ಆದುದು ಆ ಹೆಸರಿಗೆ ಹೊಸ ಆಯಾಮವೊಂದು ಸಿಕ್ಕಿದಂತಾಯಿತು. ಆ ಮೂಲಕ K.N. Taylor ಎಂಬ ಹೆಸರು ಆಂಗ್ಲ ಹೆಸರಿನಂತೆ ಕೇಳಿಸತೊಡಗಿತು. ಅದರಿಂದ ಟೈಲರಿಗೆ ಹೊಸ ಕೋಡೇನೂ ಮೂಡಲಿಲ್ಲವೆಂಬುದು ಬೇರೆ ಮಾತು.

## ಕೆಮ್ತೂರು - ಚೂರ್ಯರ ತಂಡಗಳಲ್ಲಿ

ತನ್ನದೇ ತಂಡ ಇರುವಾಗ ಇತರ ತಂಡಗಳಲ್ಲಿ ಅಭಿನಯಿಸುವ ಅಗತ್ಯವನ್ನು ಟೇಲರ್ ಅಷ್ಟಾಗಿ ಗಣನೆಗೆ ತೆಗೆದುಕೊಂಡಿರಲಿಲ್ಲ. ಆದರೆ ಟೇಲರ್‌ಗಿಂತ ಹಿರಿಯರೂ ಸಮರ್ಥ ಕಲಾವಿದರೂ ಆದ ಕೆಮ್ತೂರು ದೊಡ್ಡಣ್ಣ ಶೆಟ್ಟರು, ಟೇಲರ್‌ರ ಅಭಿನಯ ಸಾಮರ್ಥ್ಯಕ್ಕೆ ಮನಸೋತು ತನ್ನ ನಾಟಕವೊಂದರಲ್ಲಿ ಅಭಿನಯಿಸುವಂತೆ ಕೇಳಿಕೊಂಡರು. ಅವರ ಮಾತನ್ನು ಅಲ್ಲಗಳೆಯುವುದು ಸಾಧ್ಯವಾಗಲಿಲ್ಲ. ದೊಡ್ಡಣ್ಣ ಶೆಟ್ಟರ 'ಕಲ್ದಿನೆಕ್‌ಲೆನ ಕಲ್ಪ' ನಾಟಕದಲ್ಲಿ ಮುಖ್ಯ ಪಾತ್ರವೊಂದರಲ್ಲಿ ಟೇಲರ್ ಮಿಂಚಿದರು. ಟೈಲರ್ ಕಲಾವಿದರನ್ನು ನಡೆಸಿಕೊಳ್ಳುತ್ತಿದ್ದ ಬಗ್ಗೆ ದೊಡ್ಡಣ್ಣ ಶೆಟ್ಟರೇ ಅಭಿಮಾನದಿಂದ ಹೇಳಿದ್ದುಂಟು : 'ನಾನು ಮಾಡಿದರೆ ಅನ್ನ ಚಟ್ನಿ, ಟೇಲರ್ ಮಾಡಿದರೆ ಕೋಳಿಸಾರು.'

ರಮಾನಂದ ಚೂರ್ಯರು ದಕ್ಷಿಣ ಕನ್ನಡ ಕಂಡ ಹಾಸ್ಯರಂಗಕಲಾವಿದರಲ್ಲಿ ಅತ್ಯಂತ ವಿಶಿಷ್ಟ ವ್ಯಕ್ತಿ. ಅವರ ಕೊಂಕಣಿಯ ರಾಗಮಿಶ್ರಿತ ಕನ್ನಡದ ಮಾತುಗಾರಿಕೆ ತುಂಬ ಜನಪ್ರಿಯ. ಪ್ರತಿಸಂಜೆ ಚೂರ್ಯರು ಟೇಲರ್‌ರ ಅಂಗಡಿಗೆ ಬರುವುದು, ರಂಗಭೂಮಿಯನ್ನು ಕೇಂದ್ರವಾಗಿರಿಸಿ ಮಾತುಕತೆ ನಡೆಸುವುದು, ಅದೇ ರಥಬೀದಿಯ ಇನ್ನೊಂದು ತುದಿಯಲ್ಲಿರುವ 'ತಾಜ್‌ಮಹಲ್'ಗೆ ಹೋಗಿ ಕಾಫಿ ಹೀರುವುದು ನಿತ್ಯ ರೂಢಿಯಾಗಿತ್ತು.

'ಚೂರ್ಯರ ನಾಟಕದಲ್ಲಿ ಟೇಲರ್ ನಟಿಸುವುದಿಲ್ಲವೇಕೆ?' ಎಂಬ ಮಾತು ಗುಸುಗುಸು ರೂಪದಲ್ಲಿ ಹರಡಿತ್ತು. ಒಂದೊಮ್ಮೆ ಚೂರ್ಯರೂ ಟೇಲರೂ ಸೇರಿ ಈ ಸಸ್ಪೆನ್ಸನ್ನು ತೊಡೆದು ಹಾಕಲು ನಿರ್ಧರಿಸಿದರು. 'ಚೂರ್ಯರ ಸೀಂತ್ರಿ' ಎಂಬ ಚೂರ್ಯರ ನಾಟಕದಲ್ಲಿ ಟೇಲರ್ ಅಭಿನಯಿಸಿಯೇ ಬಿಟ್ಟರು.

ಟೇಲರ್ ನಾಟಕವಾಡುತ್ತಿದ್ದ ಪ್ರಾರಂಭದ ದಿನಗಳಲ್ಲಿ ಕರ್ನಾಟಕದಲ್ಲಿ ಆಧುನಿಕ ಹವ್ಯಾಸಿ ರಂಗಭೂಮಿ ಹುಟ್ಟಿಕೊಂಡಿರಲಿಲ್ಲ. ಅದಕ್ಕಾಗಿ ಎಪ್ಪತ್ತರ ದಶಕದ ಆದಿಯವರೆಗೆ ಕಾಯಬೇಕಾಯಿತು. ಅಷ್ಟರೊಳಗೆ ಟೇಲರ್ ಚೆನ್ನಾಗಿ ಬೇರುಬಿಟ್ಟಿದ್ದರು. ಹವ್ಯಾಸಿ ರಂಗಭೂಮಿಯ ವೈಜ್ಞಾನಿಕತೆ ಅವರನ್ನು ಎಲ್ಲೂ ಸೋಂಕಲಿಲ್ಲ. ಆ ಕಾಲದಲ್ಲಿ ಚಿತ್ರನಟಿ ಇಂದುಶೇಖರ್, ಬಿ.ವಿ. ಬಾಳಿಗ, ಕೆಮ್ತೂರು ದೊಡ್ಡಣ್ಣ ಶೆಟ್ಟಿ, ರಮಾನಂದ ಚೂರ್ಯ ಮೊದಲಾದವರು ನಾಟಕವಾಡುತ್ತಿದ್ದರು. ಟೇಲರ್ ಎಲ್ಲ ನಾಟಕಗಳನ್ನು ನೋಡುತ್ತಿದ್ದರೂ ತನ್ನ ನಾಟಕಗಳಲ್ಲಿ ತನ್ನದೇ ಛಾಪನ್ನು ಮೆರೆದರು. ಆದ್ದರಿಂದಲೇ ಟೇಲರ್ ತುಳುರಂಗಭೂಮಿಯ ಮಾರ್ಗಪ್ರವರ್ತಕರಲ್ಲೊಬ್ಬರಾದರು.

## ಗಲಾಟಾ ಕಲ್ಯಾಣಂ

ಟೇಲರ್ ನಾಟಕ ತಂಡಕಟ್ಟಿ ತಿರುಗಾಟ ಪ್ರಾರಂಭಿಸಿದ ದಿವಸಗಳಲ್ಲಿ ಎಲ್ಲವೂ ನೆಟ್ಟಗಿರಲಿಲ್ಲ. ಎಲ್ಲಿ ನಾಟಕ ಆಡಲು ಹೋಗಬೇಕಾದರೂ ನಾಲ್ಕಾರು ಪೆಟ್ರೋಮ್ಯಾಕ್ಸ್, ಕಾರ್‌ಬ್ಯಾಟರಿ ಹೊತ್ತುಕೊಳ್ಳಬೇಕಿತ್ತು. ಎತ್ತಿನ ಗಾಡಿ, ಕುದುರೆಗಾಡಿ, ದೋಣಿ - ಪ್ರಮುಖ ರಂಗವಾಹಕಗಳಾದುವು. ಆ ದಿನಗಳಲ್ಲಿ ಸೆಟ್‌ನ ತಲೆಬಿಸಿ ವಿಶೇಷವಾಗಿ ಇರಲಿಲ್ಲ. ಪ್ರತಿ ಸಂದರ್ಭಕ್ಕೆ ಅನುಗುಣವಾದ ಪರದೆಗಳನ್ನು ಬಳಸಿದರೆ ಅಲ್ಲಿಗೆ ಮುಗಿಯಿತು. ಪ್ರಣಯ ದೃಶ್ಯಗಳೆಲ್ಲ ಬಂದಾಗ ಪೆಟ್ರೋಮ್ಯಾಕ್ಸನ್ನು ಆವರಿಸುವಂತೆ ಬಣ್ಣದ ಕಾಗದ ಹಿಡಿಯಬೇಕು. ಮೈಕ್ ವ್ಯವಸ್ಥೆಯೂ ಅಚ್ಚುಕಟ್ಟಾಗಿ ಇರಲಿಲ್ಲ. ಅದು ಕರೆಂಟನ್ನು ನಂಬುವ ಕಾಲವಾಗಿರಲಿಲ್ಲ. ಕಾರಿನ ಬ್ಯಾಟರಿಯನ್ನು ಬಳಸಿ ಅದರ ಸಹಾಯದಿಂದ ಧ್ವನಿವರ್ಧಕದಲ್ಲಿ ಶಬ್ದ ಹೊರಡಿಸಲಾಗುತ್ತಿತ್ತು.

ಹೆಚ್ಚಿನ ನಾಟಕಗಳಲ್ಲಿ ಪುರುಷರೇ ಸ್ತ್ರೀ ಪಾತ್ರ ಮಾಡುತ್ತಿದ್ದರು. ಟೇಲರ್ ಆ ಕಲ್ಪನೆಯನ್ನು ತೊಡೆದು ಹಾಕುವ ಪ್ರಯತ್ನ ಪಟ್ಟರು. ಸ್ತ್ರೀ ಪಾತ್ರಗಳಿಗೆ ಸ್ತ್ರೀಯರು ಮುಂದೆ ಬಾರದೇ ಹೋದಾಗ ಹೊರಗಿನ ಊರುಗಳಿಂದ ವೃತ್ತಿ ನಟಿಯರನ್ನು ಕರೆಯಿಸಿದರು. ಹೀಗೆ ಬಂದ ನಟಿಯರನ್ನು ಗೇಲಿಮಾಡುವ ಯುವಕರ ತಂಡಗಳು ಹೋದ ಹೋದಲ್ಲಿ ಟೇಲರ್‌ಗೆ

ಎದುರಾಗುತ್ತಿದ್ದವು. ಜಗಳವಾಗುವ ಎಲ್ಲ ಸಾಧ್ಯತೆಗಳೂ ಇರುತ್ತಿದ್ದವು. ನಟಿಯರ ರಕ್ಷಣೆಗಾಗಿಯೇ ಕೆಲವರನ್ನು ಇರಿಸಿಕೊಳ್ಳಬೇಕಾಗಿತ್ತು. ಪೊಳಲಿ ಜಾತ್ರೆಯ ಒಂದು ಸಂದರ್ಭ. ಏಳು ದಿನಗಳ ಪ್ರದರ್ಶನ. ಒಬ್ಬಾತ ರೌಡಿ ಸಿಕ್ಕಾಪಟ್ಟೆ ತೊಂದರೆ ಕೊಡುತ್ತಿದ್ದ. ಅನ್ಯ ಮಾರ್ಗ ಕಾಣದೆ ಮಂಗಳೂರಿನಿಂದ ಜನರನ್ನು ಕೊಂಡು ಹೋಗಿ ಆತನಿಗೆ ಪಾಠ ಕಲಿಸಬೇಕಾಯಿತು.

ಮಲ್ಪೆಯಲ್ಲೂ ಅದೇ ಸ್ಥಿತಿ. ನಾಟಕ ಮುಗಿಸಿ ರಾತ್ರೋರಾತ್ರಿ ಮಂಗಳೂರಿಗೆ ಹಿಂದಿರುಗಬೇಕಾಯಿತು. ಮುಂಬಾಯಿಯಲ್ಲಿ ಟೇಲರ್ ನಾಟಕ ಪ್ರದರ್ಶನಕ್ಕೆ ಸಂಬಂಧಿಸಿದ ಒಂದು ಬ್ಯಾನರ್ ಹಾಕಲಾಗಿತ್ತು. ಅದರ ಪಕ್ಕದಲ್ಲೇ ಇದ್ದ ಇನ್ನೊಂದು ರಾಜಕೀಯ ಪಕ್ಷದ ಬ್ಯಾನರ್ ನಿಮಿತ್ತವಾಗಿ ಟೇಲರ್ ಬಂಧನಕ್ಕೊಳಗಾಗಬೇಕಾಯಿತು. '95 % for India, 5 % for Indira' ಎಂಬುದಾಗಿ ಬರೆಯಲಾದ ಬ್ಯಾನರ್ ಆಗಿತ್ತದು. ದುರ್ದೈವವಶಾತ್ ಅದರ ಅಡಿಯಲ್ಲಿ 'ಯಾನ್ ಸನ್ಯಾಸಿ ಆಪೆ' ನಾಟಕದ ಬ್ಯಾನರ್ ಇತ್ತು. ಒಬ್ಬಾತ ಪತ್ರಕರ್ತನಾದ ಛಾಯಾಗ್ರಾಹಕ ಎರಡನ್ನೂ ಸೇರಿಸಿಯೇ ಚಿತ್ರ ತೆಗೆದ. ಅಲ್ಲಿಯ ಪತ್ರಿಕೆಯಲ್ಲಿ ಈ ಎರಡರ ಚಿತ್ರ ಪ್ರಕಟಗೊಂಡಿತು. ವಾಸ್ತವದಲ್ಲಿ ಟೇಲರ್‌ರ ನಾಟಕದ ಬ್ಯಾನರಿಗೂ ಮೇಲಿನ ಬ್ಯಾನರಿಗೂ ಸಂಬಂಧವಿರಲಿಲ್ಲ. ಆದರೂ ಪೋಲಿಸರ ಸವಾಲುಗಳನ್ನು ಎದುರಿಸಬೇಕಾಯಿತು. ಹೀಗೆ ನಾಟಕದ ಉದ್ದಕ್ಕೂ ಗಲಾಟೆಗಳು ನಡೆಯುತ್ತಲೇ ಇದ್ದುವು. ಆರ್ಥಿಕ ಸ್ಥಿತಿಗತಿಯ ಏರುಪೇರೂ ಅದರ ಒಂದು ಭಾಗವೆ. ಆದರೆ ನಾಟಕಗಳ ಗಲಾಟೆಗಳ ನಡುವೆ ಅದು ಕೊಡುತ್ತಿದ್ದ ಖುಷಿ ಕಲ್ಯಾಣದಾಯಕವಾಗಿತ್ತು.

ತಂಡಕಟ್ಟಿ ಸತತ ಸಂಚಾರದಲ್ಲಿರುತ್ತಿದ್ದ ಟೈಲರ್ ಇಂದಿಗೂ ನೆಮ್ಮದಿ ಪಟ್ಟುಕೊಳ್ಳುವ ವಿಚಾರವೆಂದರೆ ಕಳೆದ ನಲುವತ್ತೆರಡು ವರ್ಷಗಳ ರಂಗಪರಂಪರೆಯಲ್ಲಿ ಒಂದೇ ಒಂದು ಅಪಘಾತವಾಗದಿದ್ದುದು. ಎಷ್ಟೋ ದೂರದಿಂದ ಪ್ರದರ್ಶನ ಮುಗಿಸಿ ಮಧ್ಯರಾತ್ರಿಯಲ್ಲಿ ಹಿಂದಿರುಗುವಾಗಲೆಲ್ಲ ಎಲ್ಲೂ ಎಳ್ಳಷ್ಟೂ ತೊಂದರೆಯಾದದ್ದಿಲ್ಲ.

ಕೆಲವೊಮ್ಮೆ ಆಘಾತಗಳಾದದ್ದಿದೆ. ಎಲ್ಲವೂ ಸಿದ್ಧವಾಗಿದ್ದಾಗ ಸಮಯಕ್ಕೆ ಸರಿಯಾಗಿ ಬರಬೇಕಾದ ನಟರು / ನಟಿಯರು ಕೈಕೊಟ್ಟದ್ದಿದೆ. ಗುರುಪುರದಲ್ಲಿ ವಿಶುಕುಮಾರರ 'ಕಲ್ಜಿಗದ ಕುರುಕ್ಷೇತ್ರ' ವೇದಿಕೆಯೇರಬೇಕಿತ್ತು. ಹೊತ್ತು ಮೀರುತ್ತಿತ್ತು. ನಟಿ ಬರಲೇ ಇಲ್ಲ. ಅಪಾರ ಸಂಖ್ಯೆಯಲ್ಲಿ ಪ್ರೇಕ್ಷಕರು ನೆರೆದಿದ್ದರು. ಅವರನ್ನು ಮರಳಿ ಕಳುಹಿಸುವ ಸಾಧ್ಯತೆಯಿರಲಿಲ್ಲ. ಇನ್ನೇನು ಮಾಡೋಣವೆಂದು ಎಲ್ಲರೂ ಕಂಗಾಲಾದರೂ ಟೇಲರ್ ಎದೆಗುಂದಲಿಲ್ಲ.

ಹೊತ್ತಿಗೆ ಸರಿಯಾಗಿ ನಟಿ ವೇದಿಕೆಯೇರಿದಳು. ಸುಂದರವಾದ ಮುಖ. ತಲೆಯನ್ನು ಸೀರೆಯ ಸೆರಗಿನಿಂದ ಮುಚ್ಚಿಕೊಂಡು ಗರತಿಯ ಪಾತ್ರಕ್ಕೆ ಗತ್ತು ತಂದಿದ್ದಳು. ವಿಗ್ ತರಲು

ಪುರುಸೊತ್ತಿರಲಿಲ್ಲವೆಂಬುದು ಯಾರ ಅರಿವಿಗೂ ಬರಲಿಲ್ಲ! ನಾಟಕಕಾರ ವಿಶುಕುಮಾರ್ ಸಭೆಯಲ್ಲಿ ಕುಳಿತಿದ್ದವರು, ಎಳ್ಳಷ್ಟೂ ಮಾತು ತಪ್ಪದ, ಅಚ್ಚುಕಟ್ಟಾಗಿ ಅಭಿನಯಿಸಿದ, ಹಿಮ್ಮೇಳದ ಸಹಕಲಾವಿದನ ಸ್ತ್ರೀ ಪಾತ್ರದ ಜಾಣ್ಮೆಗೆ ಮಾರುಹೋಗಿದ್ದರು.

ತಂಡದ ಸಮಗ್ರ ಜವಾಬ್ದಾರಿ ಹೊತ್ತಾತನ ಬವಣೆ ಯಾವ ಬಗೆಯದು ಎಂಬುದಕ್ಕೆ ಟೇಲರ್ ಇಂತಹ ಅನೇಕ ಉದಾಹರಣೆಗಳನ್ನು ಕೊಡಬಲ್ಲರು.

'ಕಾಸ್‌ದಾಯೆ ಕಂಡನೆ' ನಾಟಕದ ಎರಡನೆಯ ಪ್ರದರ್ಶನ ಕಾಸರಗೋಡಿನ ಲಲಿತಕಲಾ ಸದನದಲ್ಲಿ. ನಾಟಕದಲ್ಲಿ ಇಬ್ಬರು ಗೆಳೆಯರು. ಒಬ್ಬಾತ ಹಣವಂತನಾಗಿದ್ದು, ತನ್ನ ಮಗನನ್ನು ಅಮೇರಿಕಾಕ್ಕೆ ಕಳುಹಿಸುತ್ತಾನೆ. ಇನ್ನೊಬ್ಬಾತ ಬಡವನಾಗಿಯೇ ಇರುತ್ತಾನೆ. ಅಮೇರಿಕಾಕ್ಕೆ ಹೋದಾತ ಊರಿಗೆ ಬರಬೇಕಿದ್ದರೆ ಬಡಗೆಳೆಯನ ಮಗಳನ್ನು ತಂದುಕೊಳ್ಳುವುದೆಂದು ಆತನ ಅಪ್ಪ ತೀರ್ಮಾನಿಸುತ್ತಾನೆ. ಆತನ ಅನುಪಸ್ಥಿತಿಯಲ್ಲಿ ಹಿರಿಯರು ಮಾತನಾಡಿಕೊಂಡು ಮದುವೆ ನಿಶ್ಚಯವಾಗುತ್ತದೆ. ಅಮೇರಿಕದಿಂದ ಬಂದಾತ ಆ ಹುಡುಗಿಯನ್ನು ಒಪ್ಪಿಕೊಳ್ಳುವುದಿಲ್ಲ. ಅವಮಾನಿತಳಾದ ಆಕೆ ಆತ್ಮಹತ್ಯೆಗೆ ಮುಂದಾಗುತ್ತಾಳೆ. ಕ್ರೈಸ್ತ ಪಾದ್ರಿಯೊಬ್ಬ ಆಕೆಯನ್ನು ರಕ್ಷಿಸಿ ತನ್ನ ಮತಕ್ಕೆ ಪರಿವರ್ತಿಸಿಕೊಳ್ಳುತ್ತಾನೆ. ಆಕೆ ದೀಕ್ಷೆ ತೆಗೆದುಕೊಂಡು 'ನನ್' ಆಗುತ್ತಾಳೆ.

ಕಾಸರಗೋಡಿನ ಪ್ರೇಕ್ಷಕರು ನಾಟಕದ ಕೊನೆಯ ಮತಪರಿವರ್ತನೆಯ ಸನ್ನಿವೇಶಕ್ಕೆ ದಿಗಿಲಾದರು. ವೇದಿಕೆಗೆ ಕಲ್ಲೆಸೆದರು. ಪುಣ್ಯಕ್ಕೆ ಅದು ಕೊನೆಯ ದೃಶ್ಯವಾಗಿತ್ತು. ಟೇಲರ್ ಇಂತಹ ಆಪತ್ತು ಬರಬಹುದೆಂದು ನಿರೀಕ್ಷಿಸಿದವರಂತೆ ಗಂಭೀರವಾಗಿಯೇ ಇದ್ದರು. ಗಲಾಟೆ ಶಮನಗೊಂಡ ಮೇಲೆ ಅಲ್ಲಿಂದ ಹಿಂತಿರುಗಿದರು. ಆ ಬಳಿಕವೂ ಆ ನಾಟಕದ ಅನೇಕ ಪ್ರದರ್ಶನಗಳು ನಡೆದುವು. ಸತ್ಯಘಟನೆಯೊಂದರ ಸುತ್ತ ಹೆಣೆದ ನಾಟಕ ಅದಾಗಿದ್ದುದರಿಂದ ಅದನ್ನು ಬದಲಾಯಿಸುವುದಕ್ಕೆ ಟೇಲರ್ ಸಮ್ಮತಿಸಲಿಲ್ಲ.

ಕ್ರೈಸ್ತ ಸಂಘ ಸಂಸ್ಥೆಗಳು ಅಪಾರ ಅಭಿಮಾನದಿಂದ ಟೇಲರ್‌ರ ನಾಟಕಗಳನ್ನು ಆಡಿಸುತ್ತಿದ್ದುದಕ್ಕೆ ಟೇಲರ್‌ರ ಈ ನಾಟಕ ಕಾರಣವೆಂದೂ ಹೇಳುವವರಿದ್ದಾರೆ.

***

೧೯೬೯ರಲ್ಲಿ ಬೆಂಗಳೂರಿನಲ್ಲಿ 'ಯಾನ್ ಸನ್ಯಾಸಿ ಆಪೆ' ನಾಟಕ ಪ್ರದರ್ಶನಕ್ಕೆ ಹದಿನೇಳು ಮಂದಿ ಎಂ.ಎಲ್.ಎ.ಗಳು ಪ್ರೇಕ್ಷಕರಾಗಿ ಬಂದಿದ್ದರು. ಅವರೆಲ್ಲರನ್ನೂ ಟೇಲರ್ ಬಲೆಬೀಸಿ ನಾಟಕ ನೋಡಲು ಹಿಡಿದು ಹಾಕಿದ್ದರು. ಆ ನಾಟಕದಲ್ಲಿ ಶಾಸಕ ಹಾಗೂ ಆತನ ಪುತ್ರನ ವಿರಾಟ್ ನರ್ತನಗಳಿವೆ. ಎಲ್ಲವನ್ನೂ ಶಾಸಕರು ನೋಡಿದರು. ಮಂಗಳೂರಿನ ಹಿರಿಯ ರಾಜಕೀಯ

ಪುಡಾರಿಯೊಬ್ಬರು ಟೇಲರನ್ನು ಕರೆದು ಛೀಮಾರಿ ಹಾಕಿದರು. ಇನ್ನು ಕೆಲವರು 'ಬೆಂಗಳೂರಲ್ಲೊಬ್ಬ ಹಿರಣ್ಣಯ್ಯ, ಮಂಗಳೂರಲ್ಲೊಬ್ಬ ಟೇಲರ್' ಎಂದು ಗುಡುಗಿದರು. ಟೇಲರ್ ಇಂತಹ ಬೆದರಿಕೆಗಳಿಗೆ ಯಾವತ್ತೂ ಸೊಪ್ಪು ಹಾಕಿದವರಲ್ಲ.

***

ಮಂಗಳೂರಿನ ತಣ್ಣೀರು ಬಾವಿಯೆಂಬಲ್ಲಿನ ಸಮುದ್ರ ತಡಿಯಲ್ಲಿ ತಂಡದ ೧೮ ಸದಸ್ಯರಿಗೆ ಅಂದು ರಾತ್ರಿ ಊಟ. ಊಟಕ್ಕೆ ತೊಡಗುವುದಕ್ಕೆ ಮುನ್ನ ಏರ್ಪಾಟು ಮಾಡಿದ ತಂಡದ ಒಬ್ಬ ಸದಸ್ಯ ಟೇಲರ್ ಬಳಿ ಓಡಿಬಂದು, 'ನೀವು ಮೊದಲು ಊಟ ಮಾಡಿ, ನೀವು ಮೊದಲು ಊಟ ಮಾಡಿ' - ಎಂದು ಒತ್ತಾಯಿಸತೊಡಗಿದರು. 'ಯಾಕೆ? ನಾನು ಯಾವತ್ತೂ ಕೊನೆಗಲ್ಲವೇ ಊಟಮಾಡುವುದು?' ಎಂದು ಟೇಲರ್ ಕೇಳಿದರು. ಅದಕ್ಕಾತ ಬೇರೆ ದಾರಿಕಾಣದೆ 'ಹಾಗಲ್ಲ, ಊಟ ತರುವಾಗ ಮಡಚಿಟ್ಟ ಊಟದ ಎಲೆಯ ದೊಡ್ಡ ಕಟ್ಟ ಬಿಟ್ಟು ಬಂದಿದ್ದೇನೆ. ಸಣ್ಣ ಕಟ್ಟದಲ್ಲಿ ಇರೋದು ಆರೇ ಊಟದೆಲೆ. ನೀವು ಮೊದಲು ಊಟ ಮಾಡಿದ್ರೆ ನಾವು ಅದನ್ನು ತೊಳೆದು ಅದರಲ್ಲೇ ಊಟಮಾಡ್ತೇವೆ. 'ಟೇಲರ್‌ಗೆ ಒಮ್ಮೆ ಆಘಾತವಾದಂತೆ ಅನ್ನಿಸಿದರೂ ತಂಡದ ಸದಸ್ಯರು ತಮ್ಮ ಬಗ್ಗೆ ಇರಿಸಿಕೊಂಡ ಅಭಿಮಾನ ಕಂಡು ಮನಸ್ಸು ತುಂಬಿ ಬಂತು.

***

ಆಗಷ್ಟೇ ಪೆಟ್ರೋಮ್ಯಾಕ್ಸ್ ಹೊರಟುಹೋಗಿ ಡೂಮ್ ಲೈಟ್ಸ್ ಬಂದ ಕಾಲ. ಒಬ್ಬಾತ ಟೇಲರ್ ತಂಡಕ್ಕೆ ನಾಲ್ಕು ಲೈಟು ಬಾಡಿಗೆಗೆ ಕೊಡುತ್ತಿದ್ದ. ಆತನೇ ಲೈಟುಗಳನ್ನು ಅಪರೇಟ್ ಮಾಡುತ್ತಿದ್ದರೂ ಅದು ಹೇಗೋ 'ಎರಡು ಬಲ್ಬ್‌ಗಳು ಹೋಗಿವೆ' ಎಂದು ಬರ್ನ್ ಆದ ಎರಡು ಬಲ್ಬ್‌ಗಳನ್ನು ತೋರಿಸಿ ಅದರ ಹಣ ಕೀಳುತ್ತಿದ್ದ.

ಒಮ್ಮೆ, ನಾಟಕ ಪ್ರಾರಂಭವಾಗಿತ್ತು. ತಂಡದ ಒಬ್ಬ ಸದಸ್ಯ ಆತನ ಚೀಲ ಪರಿಶೋಧಿಸಿದಾಗ ಅದರಲ್ಲಿ ಬರ್ನ್ ಆಗಿದ್ದ ಎರಡು ಬಲ್ಬುಗಳಿದ್ದವು. ನಾಟಕ ಮುಗಿಯುತ್ತಲೇ ಆತ ಎಂದಿನಂತೆ ರಾಗವೆಳೆದ. ಟೇಲರ್ ತನ್ನ ಬಳಿ ಇಟ್ಟುಕೊಂಡಿದ್ದ ಆ ಬಲ್ಬುಗಳನ್ನು ತೋರಿಸುತ್ತ 'ಇವೇ ಬಲ್ಬುಗಳಲ್ಲವೆ?' ಎಂದರು. ಅಂದಿನಿಂದ ಆತ ಆ ತಪ್ಪು ಮಾಡಲಿಲ್ಲ.

## ಕೃತಿಗಳು - ಪ್ರತಿಕೃತಿಗಳು

ಟೇಲರ್ ಅವರು ತುಳುವಿನಲ್ಲಿ ಹದಿನೇಳು ನಾಟಕಗಳನ್ನು ರಚಿಸಿದರು. ಪ್ರತಿಯೊಂದು ನಾಟಕವು ಶ್ರೀ ಗಣೇಶ ನಾಟಕ ಸಭಾದ ಸದಸ್ಯರ ಮಧ್ಯದಲ್ಲೇ ಪೂರ್ಣರೂಪ ಕಾಣುತ್ತಿತ್ತು.

ಅಂದರೆ ನಾಟಕ ಬರೆದು ಪರಿಪೂರ್ಣವಾಗುವುದಕ್ಕೆ ಮೊದಲೇ ತರಬೇತಿ ಪ್ರಾರಂಭವಾಗುತ್ತಿತ್ತು. ಹಲವಾರು ಭಾಗಗಳನ್ನು ತರಬೇತಿ ವೀಕ್ಷಿಸುತ್ತಾ ತಿದ್ದಿ ತೀಡಿ ಒಪ್ಪಗೊಳಿಸಲಾಗುತ್ತಿತ್ತು. ಸ್ಕ್ರಿಪ್ಟ್ ಅಂತಿಮ ರೂಪ ಪಡೆಯಬೇಕಿದ್ದರೆ ನಾಟಕವೂ ವೇದಿಕೆಯೇರಲು ಸಿದ್ಧವಾಗಿರುತ್ತಿತ್ತು. ಕೈಲಾಸಂ ಈ ಥರದ ಪ್ರಯೋಗಗಳನ್ನು ಮಾಡುತ್ತಿದ್ದರು. ಟೇಲರ್ ತಾನೇ ನಟನೂ ನಾಟಕಕಾರನೂ ನಿರ್ದೇಶಕನೂ ಆಗಿರುವುದರಿಂದ ಇದು ಸಾಧ್ಯ. ನಾಟಕ ಪ್ರದರ್ಶನ ಕಾಣತೊಡಗಿ ನಾಲ್ಕಾರು ವರ್ಷಗಳಾದ ಬಳಿಕವೇ ಸ್ಕ್ರಿಪ್ಟ್ ಮುದ್ರಣಕ್ಕೆ ಹೋಗುತ್ತಿದ್ದುದು.

ಒಂದು ನಾಟಕ ಸಿದ್ಧಪಡಿಸಿ, ಒಂದು ತಿರುಗಾಟ ನಡೆಸಿ ಅದರ ಬೇಡಿಕೆ ಸ್ವಲ್ಪ ಕಮ್ಮಿ ಆಗುತ್ತ ಬರುವಾಗಲೇ ವರ್ಷವಾಗುತ್ತಿತ್ತು. ಆ ನಡುವೆ ಎರಡನೆಯ ನಾಟಕ ರಚನೆಯ ಸಿದ್ಧತೆಗಳೆಲ್ಲ ಆಗಿ ಬಿಡುತ್ತಿತ್ತು. (ಒಂದು ಸಾವಿರಕ್ಕೂ ಮಿಕ್ಕಿ ಪ್ರದರ್ಶನ ಕಂಡ 'ತಮ್ಮಲೆ ಅರ್ವತ್ತನ ಕೋಲ'ದಂತಹ ನಾಟಕಕ್ಕೆ ಹೊಸ ನಾಟಕದ ಪ್ರದರ್ಶನದ ನಡುವೆಯೂ ಪ್ರದರ್ಶನಾವಕಾಶ ಬರುತ್ತಲೇ ಇತ್ತು.) ಆಗೆಲ್ಲ ತುಳು ನಾಟಕಗಳಾಡುತ್ತಿದ್ದ ಅನೇಕ ತಂಡಗಳು ನಾಟಕದ ಅಸ್ಥಿಪಂಜರವೊಂದನ್ನು ಇರಿಸಿ ವೇದಿಕೆಯ ಮೇಲೆ ಮಾಸ್ಟರ್ ಹಿರಣ್ಣಯ್ಯನವರ ತಂತ್ರಗಾರಿಕೆಯನ್ನು - ಆ ಮಟ್ಟಿಗಲ್ಲದಿದ್ದರೂ - ಬಳಸಿ ಗಂಟೆಗಟ್ಟಲೆ ತಮಾಶೆ ಮಾತನಾಡಿ ಬೆಳಗು ಮಾಡುತ್ತಿದ್ದರು. ಆದರೆ ಟೇಲರ್‌ರ ಎಲ್ಲ ನಾಟಕಗಳಿಗೂ ಲಿಖಿತ ರೂಪವಿದ್ದು ಅದನ್ನು ಮೀರಿ ಹೋಗುವುದಕ್ಕೆ ಅವಕಾಶವಿರಲಿಲ್ಲ. ಹದಿನೇಳರಲ್ಲಿ ಹತ್ತು ನಾಟಕಗಳೂ ಪ್ರಕಟಗೊಂಡಿವೆ.

ಅವರ ನಾಟಕದ ಜನಪ್ರೀತಿ ಎಷ್ಟಿತ್ತೆಂದರೆ ಪ್ರಕಟಗೊಂಡ ನಾಟಕಗಳಷ್ಟೂ ಬಹುಬೇಗ ಖರ್ಚಾಗುತ್ತಿದ್ದವು. ಕೆಲವು ಕೃತಿಗಳಂತೂ ಅದಾಗಲೇ ಎರಡು ಮೂರು ಮುದ್ರಣಗಳನ್ನೂ ಕಂಡಿದ್ದವು. ಕೆಲವು ನಾಟಕಗಳು ಆಡಿಯೋ ಕ್ಯಾಸೆಟ್ ರೂಪದಲ್ಲಿ ಪ್ರಕಟಗೊಂಡು ಅಪಾರ ಜನಮೆಚ್ಚುಗೆಯನ್ನೂ ಪಡೆದುವು. ಅವರ ಅನೇಕ ನಾಟಕಗಳು ಕರ್ನಾಟಕದಲ್ಲಷ್ಟೇ ಅಲ್ಲದೆ ಮುಂಬಯಿ, ಮದರಾಸಿನಂಥ ಹೊರನಾಡುಗಳಲ್ಲೂ ಇತರ ರಂಗ ತಂಡಗಳಿಂದ ಪ್ರದರ್ಶನ ಕಾಣುತ್ತಿದ್ದವು. ಈಗಲೂ ಕಾಣುತ್ತಿವೆ. ಹೆಚ್ಚಿನ ಕಡೆಗಳಲ್ಲಿ ನಾಟಕಗಳನ್ನಾಡುವಾಗ, ಟೇಲರ್ ಅಭಿನಯಿಸಿದ ಪಾತ್ರದ ಪ್ರತಿಕೃತಿಯನ್ನು ನಿರ್ಮಿಸುವ ಪ್ರಯತ್ನ ನಡೆಯುತ್ತದೆ. ಆದರೆ ಟೇಲರ್‌ರ ಮುದ್ರೆಯನ್ನು ಅಳವಡಿಸಿಕೊಳ್ಳುವುದು ಎಷ್ಟೋ ಸಂದರ್ಭಗಳಲ್ಲಿ ಆ ರಂಗತಂಡಗಳಿಗೆ ಸಾಧ್ಯವಾಗುತ್ತಿರಲಿಲ್ಲ.

ಟೇಲರ್ ತಮ್ಮ ನಾಟಕಗಳ ಪ್ರಕಟಿತ ಕೃತಿಗಳಲ್ಲಿ ಹಾಡುಗಳನ್ನು ಅಳವಡಿಸಲಿಲ್ಲ. ಬದಲಿಗೆ ಸನ್ನಿವೇಶವನ್ನು ನಮೂದಿಸಿ ಅದಕ್ಕನುಗುಣವಾಗಿ ಪಾತ್ರಗಳು ಹಾಡುವುವು ಎಂಬುದಷ್ಟನ್ನೇ ತಿಳಿಸಲಾಗುತ್ತಿತ್ತು. ಟೇಲರ್‌ರ ತಂಡ ಆ ನಾಟಕಗಳನ್ನು ಪ್ರದರ್ಶಿಸುವಾಗ ಆ

ಕಾಲದ ಹಿಂದಿ ಸಿನಿಮಾದ ಅತ್ಯಂತ ಜನಪ್ರಿಯ ಹಾಡುಗಳ ಧಾಟಿಯನ್ನು ಬಳಸಿಕೊಳ್ಳುತ್ತಿದ್ದುದೂ ಉಂಟು. ಹಾಗೆ ಮಾಡಿದಾಗ ಆ ಹಾಡುಗಳು ಬಹುಬೇಗ ಜನಪ್ರಿಯವಾಗುತ್ತವೆ. ಮತ್ತು ನಾಟಕದ ಜನಮನ್ನಣೆ ಜನಸಮುದಾಯದ ಮಧ್ಯದಲ್ಲಿ ಅಧಿಕಗೊಳ್ಳುತ್ತವೆ.

ಯಾವ ತಂಡಗಳು ಟೇಲರ್ ನಾಟಕಗಳನ್ನು ತಾವಾಗಿಯೇ ಆಡುತ್ತಿದ್ದವೋ ಆ ತಂಡಗಳು ಕೂಡ ಟೇಲರ್ ಬಳಸುತ್ತಿದ್ದ ಹಾಡುಗಳನ್ನು ಕದಿಯುತ್ತಿದ್ದ ಪ್ರಸಂಗಗಳೂ ಇದ್ದುವು.

ಟೇಲರ್‌ರ ನಾಟಕಗಳ ದೃಶ್ಯಗಳು ಜನಪ್ರಿಯ ಕಾದಂಬರಿಗಳ ಅಧ್ಯಾಯಗಳಂತೆ. ಒಂದು ದೃಶ್ಯ ಕೌಟುಂಬಿಕ ಗಂಭೀರ ಪ್ರಸಂಗಗಳನ್ನು ವಿವರಿಸುತ್ತಿದ್ದಲ್ಲಿ ಅದರ ಮುಂದಿನ ದೃಶ್ಯ ಹಾಸ್ಯದ ಸನ್ನಿವೇಶ ನಿರ್ಮಿಸಿ ಪ್ರೇಕ್ಷಕರನ್ನು ಮುದಗೊಳಿಸುತ್ತಿದ್ದವು. ಕೆಲವು ರಂಗತಂಡಗಳು ಇದನ್ನು ಚೆನ್ನಾಗಿಯೇ ದುರುಪಯೋಗ ಪಡಿಸಿಕೊಂಡದ್ದೂ ಇದೆ. ಅಂದರೆ, ಟೇಲರ್‌ರ ನಿರ್ದಿಷ್ಟ ನಾಟಕದ ಹಾಸ್ಯ ದೃಶ್ಯಗಳನ್ನೆಲ್ಲ ಎತ್ತಿಕೊಂಡು ಪೋಣಿಸಿ ಅದನ್ನೇ ನಕ್ಕು ನಗಿಸುವ ನಾಟಕವನ್ನಾಗಿ ಪ್ರದರ್ಶಿಸುವುದು. ಯುವಜನ ವಾರ್ಷಿಕೋತ್ಸವ, ಕಾಲೇಜುಗಳ ವಾರ್ಷಿಕೋತ್ಸವಗಳಲ್ಲಿ ಇಂತಹ ನಾಟಕಗಳು ಬಹಳ ಜನಪ್ರೀತಿಯನ್ನು ಪಡೆಯುತ್ತಿದ್ದರೂ ಇದರಿಂದ ಟೇಲರ್ ಅವರಿಗೆ ಒಳ್ಳೆಯ ಹೆಸರು ಬರುತ್ತಿರಲಿಲ್ಲ. ಅವರ ಉದ್ದೇಶವನ್ನು ಇಂತಹ ಪ್ರದರ್ಶನಗಳು ದಿಕ್ಕುಗೆಡಿಸುತ್ತಿದ್ದವು. ಕೆಲವು ತಂಡಗಳು ಟೇಲರ್‌ರ ಹೆಸರು ಬಳಸುತ್ತಿರಲಿಲ್ಲ. ನಾಟಕದ ಹೆಸರನ್ನೂ ಬದಲಾಯಿಸುತ್ತಿದ್ದರು. ಟೇಲರ್ ಅಂಥವರನ್ನು ತರಾಟೆಗೆ ತೆಗೆದುಕೊಳ್ಳುತ್ತಿರಲಿಲ್ಲ. ತನ್ನ ಹೆಸರನ್ನು ಅವರು ಹೇಳುತ್ತಿದ್ದರೆ ಅಥವಾ ನಾಟಕದ ಹೆಸರನ್ನು ಹೇಳುತ್ತಿದ್ದರೆ ಟೇಲರ್‌ಗೆ ಅವಮಾನ ಆಗುತ್ತಿತ್ತು. 'ಹೆಸರು ಹೇಳದ್ದಕ್ಕೆ ನಾನು ಬದುಕಿದೆ.' ಇದು ಟೇಲರ್‌ರ ಅಂಬೋಣ. ಹೆಸರು ಹೇಳದಿದ್ದರೂ ಟೇಲರ್‌ರ ನಾಟಕದ ಸಂಭಾಷಣೆಗಳು ಅವರ ಸ್ವಂತ ಮುದ್ರೆಯೊಂದಿಗೆ ಕಾಣಿಸಿಕೊಳ್ಳುತ್ತಿದ್ದುದರಿಂದ ನೋಡುನೋಡುತ್ತಿದ್ದಂತೆಯೇ ಗುಟ್ಟು ಬಹಿರಂಗಗೊಳ್ಳುತ್ತಿತ್ತು.

## ದರ್ಶನ - ಪ್ರದರ್ಶನ

ಸಿನಿಮಾ - ಥಿಯೇಟರುಗಳಲ್ಲಿ ಮಾರ್ನಿಂಗ್ ಶೋ ನಡೆಯುವುದು ಆ ದಿನಗಳಲ್ಲಿ ಅಂತಹ ಮಹತ್ವದ ವಿಚಾರವಾಗಿರಲಿಲ್ಲ. ನಾಟಕದ ಮಾರ್ನಿಂಗ್ ಶೋ ಎಂಬುದು ದಕ್ಷಿಣ ಕನ್ನಡ ಜಿಲ್ಲೆಗೆ ಅದರಲ್ಲೂ ತುಳುರಂಗಭೂಮಿಗೆ ಒಂದು ಕಾಲದಲ್ಲಿ ಕನಸಿನ ಮಾತು.

೧೯೭೦ರಲ್ಲಿ ಶ್ರೀ ಗಣೇಶ ನಾಟಕ ಸಭಾದ ಬೆಳ್ಳಿಹಬ್ಬದ ಸಂಭ್ರಮ. ಮಂಗಳೂರಿನ ಪುರಭವನದಲ್ಲಿ ಅಂದು ಪೂರ್ವಾಹ್ನ ಆ ಪ್ರಯುಕ್ತ 'ಕಂಡನೆ ಬುಡೆದಿ' ನಾಟಕದ ಮಾರ್ನಿಂಗ್ ಶೋ! ವಿಶಾಲವಾದ ಪುರಭವನವನ್ನು ಕತ್ತಲು ಮಾಡುವುದು ಬಹುಪ್ರಯಾಸದ ಕೆಲಸ.

ಪುರಸಭೆಯವರಂತೂ ಆ ಬಗ್ಗೆ ತಲೆಕೆಡಿಸಿದ್ದೇ ಇಲ್ಲ. ಟೇಲರ್ ಅದಕ್ಕೊಂದು ಮಾರ್ಗ ಕಂಡುಕೊಂಡರು. ಎಲ್ಲಾ ಕಿಟಕಿಗಳಿಗೆ ಹಾಗೂ ವೆಂಟಿಲೇಟರುಗಳಿಗೆ ಆಗುವಷ್ಟು ಕಪ್ಪು ಡ್ರಾಯಿಂಗ್ ಶೀಟ್ ತರಿಸಿದರು. ಪುರಭವನ ಪೂರ್ತಿ ಕಪ್ಪು ಆವರಿಸಿತು. ನಾಟಕ ಪ್ರಾರಂಭವಾಯಿತು.

ಈ ಅನುಭವಕ್ಕೆ ಪೂರ್ವಭಾವಿಯಾಗಿ ೧೯೬೭ರಲ್ಲಿ ಟೇಲರ್ ಮುಂಬಯಿಯ ಪ್ರಖ್ಯಾತ ಷಣ್ಮುಖಾನಂದ ಸಭಾಂಗಣದಲ್ಲಿ 'ಯಾನ್ ಸನ್ಯಾಸಿ ಆಪೆ' ನಾಟಕದ ಮಾರ್ನಿಂಗ್ ಶೋ ನಡೆಸಿದ್ದರು. ಅಲ್ಲಿ ಅದಕ್ಕೆ ಸಂಬಂಧಪಟ್ಟ ವ್ಯವಸ್ಥೆಗಳು ತಕ್ಕಮಟ್ಟಿಗಾದರೂ ಇದ್ದುವು.

ಈ ಬಗೆಯ ಸಾಹಸ ಮಾಡುವುದಕ್ಕೆ ಟೇಲರ್‌ರದ್ದು ಎತ್ತಿದ ಕೈ. ಅಂದು ಅವರು ಮಾರ್ನಿಂಗ್ ಶೋ ಮಾಡಿದ್ದು ಇಂದಿನವರೆಗೆ ದಾರಿಹಾಕಿ ಕೊಟ್ಟ ಹಾಗಾಯಿತು.

ಟೇಲರ್ ತುಳುನಾಟಕ ಆಡುತ್ತಿದ್ದ ಹೊಸತರಲ್ಲಿ ಮಂಗಳೂರು ಬಿಟ್ಟರೆ ಹೊರ ಜಿಲ್ಲೆಗಳಲ್ಲಾಗಲೀ ಹೊರನಾಡುಗಳಲ್ಲಾಗಲೀ ತುಳು ನಾಟಕ ಆಡಿಸುವ ಕೇಂದ್ರಗಳಿರಲಿಲ್ಲ. ಟೇಲರ್ ಸ್ವತಃ ತಿರುಗಾಟ ನಡೆಸಿ ಕೇಂದ್ರಗಳನ್ನು ಕಂಡುಕೊಂಡರು. ಕೆಲವು ಕೇಂದ್ರಗಳಲ್ಲಿ ಪೋಲಿಸ್ ಇಲಾಖೆಯವರು, ಫಾರೆಸ್ಟ್ ಇಲಾಖೆಯವರು ಟೇಲರ್‌ರ ಮೇಲೆ ಅನೂಹ್ಯವಾದ ವಿಶ್ವಾಸ ತೋರಿಸಿ, ತಮ್ಮ ಜೀಪಿನಲ್ಲಿ ಕರೆದುಕೊಂಡು ಹೋಗಿ ವಿವಿಧ ಕಡೆಗಳಲ್ಲಿ ಟಿಕೇಟ್ ಮಾರಿಸಿ, ದೊಡ್ಡಮೊತ್ತವನ್ನು ಸಂಗ್ರಹಿಸಿಕೊಟ್ಟದ್ದೂ ಇದೆ. ('ಕಂಡನೆ ಬುಡೆದಿ'ಯ ಎಸ್. ಪಿ. ಪಾತ್ರದ ನಿಯತ್ತು ಅವರಿಗೆ ಖುಷಿ ಕೊಟ್ಟಿರಲೂ ಸಾಕು. ಸಾಮಾನ್ಯವಾಗಿ ನಾಟಕ, ಸಿನಿಮಾಗಳಲ್ಲಿ ಪೋಲಿಸರು ಗೇಲಿಗೆ ಗುರಿಯಾಗುತ್ತಲೇ ಇರುತ್ತಾರೆ.) ಅಂತಹ ಕೇಂದ್ರಗಳನ್ನು ಟೇಲರ್ ಕಂಡುಕೊಂಡದ್ದರಿಂದ ಇಂದಿನ ಪೀಳಿಗೆಗೆ ಸಲೀಸಾಗಿ ಅಲ್ಲಿ ಹೋಗಿ ನಾಟಕ ಮಾಡುವ ಉನ್ಮೇಶ ಬಂದಿರಬಹುದು ಎನ್ನಬಹುದೇನೊ.

ಟೇಲರ್‌ರ ನಾಟಕಗಳನ್ನು ಚಿತ್ರರಂಗದ ಅನೇಕ ಮಹಾನ್ ಕಲಾವಿದರು ನೋಡಿ ಮೆಚ್ಚಿದ್ದಾರೆ. ದಿಲೀಪ್‌ಕುಮಾರ್, ಸಂಜೀವ್ ಕುಮಾರ್, ರಾಜಕುಮಾರ್ ಮೊದಲಾದವರು ಅವರಲ್ಲಿ ಕೆಲವರು. 'ಕಾಸ್‌ದಾಯೆ ಕಂಡನೆ' ಚಲನಚಿತ್ರದ ಮುಂಬಯಿ ಪ್ರದರ್ಶನದ ಉದ್ಘಾಟನಾ ಸಮಾರಂಭದ ಕಾರ್ಯಕ್ರಮವನ್ನು ಆಗಿನ ಉದಯೋನ್ಮುಖ ಚಿತ್ರನಟ ಅಮಿತಾಬ್ ಬಚ್ಚನ್ ನಿರ್ವಹಿಸಿದ್ದರು.

ಟೇಲರ್‌ರ ನಾಟಕಗಳು ದಕ್ಷಿಣಕನ್ನಡ ಜಿಲ್ಲೆಯ ಉದ್ದಗಲಗಳಲ್ಲಿ ಹೆಚ್ಚಿನ ಸಂಖ್ಯೆಯ ಪ್ರಯೋಗಗಳನ್ನು ಕಾಣಲು ಎರಡು ತಂಡಗಳು ಮುಖ್ಯವಾಗಿ ಕಾರಣೀಭೂತವಾಗಿದ್ದವು. ಬಡವರ ಬಂಧು ಚಾರಪ್ಪನವರ ನೇತೃತ್ವದ 'ತುಳುರಾಜ್ಯ ಸಮಿತಿ' ಅದರಲ್ಲಿ ಪ್ರಮುಖವಾದ ತಂಡ. ತುಳುರಾಜ್ಯ ಸಮಿತಿಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಾಟಕಗಳನ್ನು ಆಯೋಜಿಸುತ್ತಿದ್ದರೆ

'ಮುಂಬೆಳಕು' ಪತ್ರಿಕೆಯ ಶ್ರೀನಿವಾಸ ಗುರಿಕಾರ್ ಹಾಗೂ ಗೆಳೆಯರ ಇನ್ನೊಂದು ತಂಡವು ಕರಾವಳಿಯುದ್ದಕ್ಕೂ ಟೇಲರ್ ಬಳಗದ ನಾಟಕವನ್ನು ಆಯೋಜಿಸುತ್ತಿದ್ದರು.

ಸುಮಾರು ನೂರಕ್ಕೂ ಅಧಿಕ ಸಂಘ-ಸಂಸ್ಥೆಗಳು, ರಾಜಕೀಯ ಪಕ್ಷಗಳು ಟೇಲರ್‌ರ ನಾಟಕಗಳನ್ನು 'ಧನಸಹಾಯಾರ್ಥ' ಆಡಿಸಿವೆ. ಕೆಲವು ಸಂಸ್ಥೆಗಳು ಪ್ರತಿವರ್ಷವೂ ನಾಟಕ ಆಡಿಸಿ ತಮ್ಮ ಸಂಸ್ಥೆಯ ಆ ವರ್ಷದ ಖರ್ಚು ವೆಚ್ಚಗಳಿಗೆ ಬೇಕಾದ ದುಡ್ಡನ್ನು ಸಂಪಾದಿಸಿಕೊಳ್ಳುತ್ತಿದ್ದುವು.

ಹೊಸ ನಾಟಕದ ರಚನೆಯಾಗುತ್ತಿದ್ದಂತೆಯೆ ಹಬ್ಬ ನಡೆಯುವ ಕಡೆಗಳಲ್ಲಿ ಬ್ಯಾನರ್ ಕಾಣಿಸಿಕೊಳ್ಳುತ್ತಿದ್ದವು. ಮೊದಲ ಹತ್ತಾರು ಪ್ರದರ್ಶನಗಳು ಬಿರಬಿರನೆ 'ಬುಕ್' ಆಗಿಬಿಡುತ್ತಿದ್ದುವು. ಸಾಮಾನ್ಯವಾಗಿ ಹೊಸ ನಾಟಕದ ಮೊದಲ ಪ್ರದರ್ಶನ ಸುರತ್ಕಲ್ ವಿದ್ಯಾದಾಯಿನೀ ಶಾಲೆಯ ಆವರಣದಲ್ಲಿ ನಡೆಯುತ್ತಿತ್ತು.

ಜಾತ್ರೆಯ ದಿನಗಳೂ ಸಂತೆಯ ಜಾಗಗಳೂ ನಾಟಕ ಆಡುವುದಕ್ಕೆ ಪ್ರಶಸ್ತವಾದ ತಾಣವೆಂದು ಅವರು ಸರಿಯಾಗಿಯೇ ಊಹಿಸಿದ್ದರು. ಪೊಳಲಿ ಜಾತ್ರೆ, ಕಾಪು ಮಾರಿಗುಡಿ ಜಾತ್ರೆ ಬಂತೆಂದರೆ ಟೇಲರ್ ತಂಡಕ್ಕೆ ವಿಶ್ರಾಂತಿಯಿಲ್ಲ. ಸಂಜೆ ೬.೩೦ರಿಂದ ಮರುದಿನ ಮುಂಜಾನೆಯವರೆಗೆ ನಾಲ್ಕು ಪ್ರದರ್ಶನಗಳಂತೆ ನಾಟಕವಾಡಿದ ಎಷ್ಟೋ ಸಂದರ್ಭಗಳಿದ್ದುವು. ದಿನಕ್ಕೆ ನಾಲ್ಕು ಪ್ರದರ್ಶನ ಮಾಡುವುದಕ್ಕೆ ಅಸಾಧಾರಣ ಏಕಾಗ್ರತೆ, ಅರ್ಪಣಾ ಮನೋಭಾವ ಹಾಗೂ ದೈಹಿಕ ಶಕ್ತಿಯ ಅಗತ್ಯವಿದೆ. ಟೇಲರ್‌ರ ತಂಡಕ್ಕೆ ಅವೆಲ್ಲವನ್ನೂ ಯಶಸ್ವಿಯಾಗಿ ನಿಭಾಯಿಸುವುದಕ್ಕೆ ಸಾಧ್ಯವಾಗಿದೆ.

## ಕನ್ನಡದಲ್ಲಿ ಟೇಲರ್

ಕೆ.ಎನ್. ಟೇಲರ್ ಎಂದಾಗ ತುಳುನಾಟಕಗಳ ಪ್ರಾತಿನಿಧಿಕ ವ್ಯಕ್ತಿತ್ವವೊಂದನ್ನು ಕಣ್ಣೆದುರಿಗೆ ತಂದುಕೊಳ್ಳುವುದು ಕರ್ನಾಟಕದಲ್ಲಿ ಸರ್ವೇ ಸಾಮಾನ್ಯ. ಕನ್ನಡದಲ್ಲೂ ಟೇಲರ್ ಕೃಷಿ ಮಾಡಿದ್ದರೆಂಬುದು ಮರೆವಿಗೆ ಸಂದುಹೋದ ಸುದ್ದಿಯಾದರೂ ರಂಗಭೂಮಿಯ ಪ್ರವೇಶ ಕಾಲದಲ್ಲೇ ಟೇಲರ್ ಚಾರಿತ್ರಿಕ ನಾಟಕಗಳ ನಟರಾಗಿ, ನಿರ್ದೇಶಕರಾಗಿ ಕಾಣಿಸಿಕೊಂಡಿದ್ದರು. ಛತ್ರಪತಿ ಶಿವಾಜಿ, ರಾಣಾಪ್ರತಾಪ್ ನಾಟಕಗಳನ್ನು ನಿರ್ದೇಶಿಸಿ ನಟಿಸಿದ ಬಳಿಕ ಹಲವು ಕನ್ನಡ ಸಾಮಾಜಿಕ ನಾಟಕಗಳಲ್ಲಿ ಅವರು ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಅಣ್ಣ - ತಮ್ಮ; ಅಕ್ಕ - ತಂಗಿ, ವರಯಾರು?, ಧೂಮಕೇತು, ಧೂಮಕೇತು, ತ್ಯಾಗಮೂರ್ತಿ, ಲಕ್ಷಾಧೀಶ್ವರ,

ಕಲಿಯುಗದ ಕುರುಕ್ಷೇತ್ರ, ರೊಟ್ಟಿ ಋಣ - ಹೀಗೆ ಕನ್ನಡ ರಂಗಭೂಮಿಯ ನಾಟಕಗಳು ಶ್ರೀ ಗಣೇಶ ನಾಟಕ ಸಭಾ ಹಾಗೂ ಇತರ ಸಂಸ್ಥೆಗಳ ಮೂಲಕ ಪ್ರದರ್ಶನಗೊಂಡಿದ್ದವು. ಕೆಲವು ನಾಟಕಗಳನ್ನು ನಿರ್ದೇಶಿಸುವುದರ ಜೊತೆಗೆ ಆ ಎಲ್ಲ ನಾಟಕಗಳಲ್ಲಿ ಅಭಿನಯಿಸಿರುವುದು ಅವರ ವೈವಿಧ್ಯಮಯ ಸಾಮರ್ಥ್ಯವನ್ನು ಶ್ರುತಪಡಿಸುತ್ತವೆ.

ಒಮ್ಮೆ ತುಳು ರಂಗಭೂಮಿಗೆ ಬಂದ ಬಳಿಕ ಒಂದರ ಹಿಂದೆ ಒಂದರಂತೆ ತುಳು ನಾಟಕಗಳನ್ನು ಬರೆಯತೊಡಗಿದಾಗ ಪ್ರೇಕ್ಷಕರು ಟೇಲರ್ ಬರೆಯುವ ಹೊಸ ನಾಟಕಗಳಿಗಾಗಿ ಕಾಯುತ್ತಿದ್ದರು. ಪ್ರಕಟಗೊಂಡ ಅವರ ನಾಟಕಗಳೂ ಅಷ್ಟೆ; ಕಾಲವಿಳಂಬವಿಲ್ಲದೆ ಮಾರಾಟವಾಗುತ್ತಿದ್ದವು. ಆ ಭರಾಟೆಯಲ್ಲಿ ಕನ್ನಡ ನಾಟಕಗಳು ಅವರ ರಂಗದಿಂದ ಹಿಂದೆ ಸರಿದವು. ತುಳುನಾಟಕಗಳಿಗೆ ಬಹಳ ಮಂದಿ ನಿರ್ದೇಶಕರಿಲ್ಲವಾಗಿದ್ದು ಆ ರಂಗಕ್ಕೆ ಅವರ ಸೇವೆಯ ಅಗತ್ಯವಿತ್ತು. ಅದನ್ನವರು ಸರಿಯಾಗಿಯೇ ಬಳಸಿಕೊಂಡರು. ಮೇಲಾಗಿ ಕನ್ನಡ ನಾಟಕಗಳು ಸಾಕಷ್ಟು ಕೀರ್ತಿಯನ್ನಾಗಲೀ ಧನವನ್ನಾಗಲೀ ಅವರಿಗೆ ತಂದುಕೊಡಲಿಲ್ಲ. 'ತುಳು - ರಂಗಭೂಮಿಯಷ್ಟೇ ಟೇಲರ್‌ರ ಬದುಕಲ್ಲ' ಎಂಬುದನ್ನು ಕಂಡುಕೊಳ್ಳುವುದಕ್ಕೆ ಈ ಕೆಲವು ನಾಟಕಗಳ ಉದಾಹರಣೆಗಳನ್ನು ಗಮನಿಸಬಹುದು.

## ನಾಟಕೋತ್ಸವ

ಶ್ರೀ ಗಣೇಶ ನಾಟಕ ಸಭಾ ಬೆಳ್ಳಿಹಬ್ಬದ ವರ್ಷಕ್ಕೆ ಕಾಲಿಟ್ಟಾಗ (೧೯೮೨) ಟೇಲರ್ ಅದನ್ನೊಂದು ಉತ್ಸವವನ್ನಾಗಿಸಲು ಅಪೇಕ್ಷೆ ಪಟ್ಟರು. ಮಂಗಳೂರಿನ ಪುರಭವನದಲ್ಲಿ ಕೆ. ಎನ್. ಟೇಲರ್ ತಂಡ ಮೂರುದಿನಗಳ ನಾಟಕೋತ್ಸವವನ್ನು ಆಚರಿಸಿತು. ೧೯೯೦ರಲ್ಲಿ ಮಂಗಳೂರಿನ ಡಾನ್‌ಬಾಸ್ಕೊ ಸಭಾಂಗಣದಲ್ಲಿ ತಮ್ಮ ತಂಡ ಆಡಿದ್ದ ಹತ್ತು ನಾಟಕಗಳನ್ನು ನಿರಂತರವಾಗಿ ಆಡಿ ಹಬ್ಬವನ್ನು ಆಚರಿಸಿತು.

ಮಂಗಳೂರಿನಲ್ಲಿ ಮಾತ್ರ ನಾಟಕೋತ್ಸವ ಮಾಡಿದ್ದಷ್ಟೇ ಅದರ ಕೋಡು ಮೂಡುವ ಸಂಗತಿಯಾಗುವುದಿಲ್ಲ. ಮುಂಬಯಿಯ ವಿಶ್ವೇಶ್ವರಯ್ಯ ಹಾಲ್‌ನಲ್ಲಿ ಐದು ದಿನಗಳ ನಾಟಕೋತ್ಸವವನ್ನು (೧೯೯೧) ಆಚರಿಸಿದ್ದಾಗಲೀ ಸಂಸ್ಥೆಯ ೩೦ನೆಯ ಹುಟ್ಟುಹಬ್ಬದ ಪ್ರಯುಕ್ತವಾಗಿ ೧೯೯೫ರಲ್ಲಿ ಬೆಂಗಳೂರಿನಲ್ಲಿ ಮೂರು ದಿನಗಳ ಉತ್ಸವ ನಡೆಸಿದ್ದಾಗಲೀ ಬೆಳಗಾಂ, ಧಾರವಾಡ, ಹುಬ್ಬಳ್ಳಿ, ಸಕಲೇಶಪುರ ಹಾಗೂ ಚಿಕ್ಕಮಗಳೂರಿನಲ್ಲಿ ನಿರಂತರ ಐದು ದಿನಗಳ ಉತ್ಸವ ನಡೆಸಿದ್ದಾಗಲೀ ಗೋವಾದಲ್ಲಿ ಮೂರು ದಿನಗಳ ಉತ್ಸವ ಏರ್ಪಡಿಸಿದ್ದಾಗಲೀ ವಿಶೇಷ ಮಹತ್ವ ಪಡೆಯುತ್ತವೆ. ಹೊರನಾಡುಗಳಲ್ಲಿ ನಾಟಕೋತ್ಸವಗಳನ್ನು ನಡೆಸಬೇಕಿದ್ದರೆ

ಆಯಾ ಊರಿನ ಅಭಿಮಾನಿಗಳ ವಿಶೇಷ ಪ್ರೋತ್ಸಾಹ ಅಗತ್ಯ. ಕೆ.ಎನ್. ಟೇಲರ್‌ರ ಅಭಿಮಾನಿಗಳು, ತುಳುಭಾಷೆ ಹಾಗೂ ಸಂಸ್ಕೃತಿಯ ಅಭಿಮಾನಿಗಳು ಹೊರನಾಡುಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಇರುವುದು ಟೇಲರ್‌ರ ಕೀರ್ತಿಯನ್ನು ಭಾರತದ ಉದ್ದಗಲಗಳಲ್ಲಿ ಹರಡುವುದಕ್ಕೆ ನೆರವಾಯಿತು.

ತಂಡದ ಇತರ ಸದಸ್ಯರ ಪೂರ್ಣ ಸಹಕಾರವಿದ್ದರೂ ಟೇಲರ್‌ರ ರಂಗಚಟುವಟಿಕೆಗಳೆಲ್ಲ ಒಂದು ಬಗೆಯ ಏಕವ್ಯಕ್ತಿ ಪ್ರದರ್ಶನದಂತೆ. ತಾನೇ ಜನಸಂಪರ್ಕವನ್ನೂ ಸಾಧಿಸಿ, ರಂಗದ ಸಮಗ್ರ ಚಟುವಟಿಕೆಗಳ ಉಸ್ತುವಾರಿ ನೋಡಿಕೊಳ್ಳುತ್ತ ನಾಲ್ಕು ದಶಕಕ್ಕೂ ಮೀರಿ ನಡೆಸಿದ ಹೋರಾಟದ ಬದುಕೇ ಅವರನ್ನು ರಂಗದ ಮೇಲೆ ಹಾಗೂ ಕೆಳಗೆ ಉಳಿಸಿಕೊಂಡು ಬಂದಿದೆ. ಜುಲೈ ೩೦, ೨೦೦೦ದಂದು ಮಂಗಳೂರಿನ ಡಾನ್ ಬಾಸ್ಕೋ ಸಭಾಂಗಣದಲ್ಲಿ ಶ್ರೀ ಗಣೇಶ ನಾಟಕ ಸಭಾದ ೪೨ನೆಯ ವಾರ್ಷಿಕೋತ್ಸವವನ್ನು ಅದ್ದೂರಿಯಾಗಿ ಜರಗಿಸಲಾಯಿತು. ಇನ್ನಷ್ಟು ಕಸುವು ಅವರಲ್ಲಿ ಉಳಿದಿರುವುದು ತುಳು ರಂಗಭೂಮಿಯ ಭಾಗ್ಯ.

## ಬೆಳ್ಳಿತೆರೆಯ ಮೇಲೆ

ಮದರಾಸಿನ ಸಂಪರ್ಕ ಒದಗಿದಂದಿನಿಂದ ಟೇಲರ್‌ರ ಬೆಳ್ಳಿ ತೆರೆಯ ಕನಸು ಬೆಳೆಯುತ್ತಲೇ ಹೋಯಿತು. ಆದರೆ ಆಗಿನ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ತುಳು ಸಮುದಾಯದ ಹೊರತಾಗಿ ಬೇರೆ ಪ್ರೇಕ್ಷಕರನ್ನೆಲ್ಲಿಂದ ತರೋಣ?

ಟೇಲರ್ ಅದಾವುದರ ಬಗ್ಗೆಯೂ ಚಿಂತಿಸಲಿಲ್ಲ. ಅದಾಗಲೇ ನಟರಾಗಿ, ನಾಟಕಕಾರರಾಗಿ, ನಿರ್ದೇಶಕರಾಗಿ ನಾಟಕರಂಗದಲ್ಲಿ ಸಾಧಿಸಿದ್ದನ್ನು ಚಿತ್ರರಂಗದಲ್ಲೂ ಸಾಧಿಸಹೊರಟರು. ತುಳು ಸಿನಿಮಾರಂಗವೊಂದು ಉದಯವಾಯಿತು. ದಾರೆದ ಬುಡೆದಿ, ಪಗೆತಪುಗೆ, ಬಿಸತ್ತಿ ಬಾಬು, ಯಾನ್ ಸನ್ಯಾಸಿ ಆಪೆ, ಕಾಸ್‌ದಾಯೆ ಕಂಡನೆ, ಏರ್‌ಮಲ್ತಿನ ತಪ್ಪು, ತುಲುನಾಡ ಸಿರಿ, ಸಾವಿರಡೊರ್ತಿ ಸಾವಿತ್ರಿ, ಭಾಗ್ಯವಂತೆದಿ ಹೀಗೆ ಹಲವು ತುಳು ಚಲನಚಿತ್ರಗಳು ಟೇಲರ್ ನಿಮಿತ್ತವಾಗಿಯೇ ಪರದೆಯಲ್ಲಿ ಮೆರೆದವು. ಚಿತ್ರಕತೆ, ಸಂಭಾಷಣೆ, ಅಭಿನಯಗಳ ಮೂಲಕ ಪ್ರಾರಂಭದ ಚಿತ್ರಗಳಲ್ಲಿ ಕಾಣಿಸಿಕೊಂಡ ಅವರು ನಿಧಾನವಾಗಿ ನಿರ್ದೇಶನಕ್ಕೂ ಕೈಯಿಕ್ಕಿದರು. ತಯಾರಕರೂ ಆದರು. ಆ ಮೂಲಕ ಚಿತ್ರರಂಗದಲ್ಲೂ ಸವ್ಯಸಾಚಿತ್ವವನ್ನು ಪ್ರದರ್ಶಿಸಿದರು.

ಅನೇಕ ವೇಳೆ ಟೇಲರ್‌ರು ಅನೇಕ ಕೆಲಸಗಳಿಗೆ ಏಕಕಾಲದಲ್ಲಿ ಕೈ ಹಾಕಿ ಯಾವುದನ್ನೂ ಪೂರ್ತಿಗೊಳಿಸುವುದು ಸಾಧ್ಯವಾಗದೇ ಒದ್ದಾಡಿರಬಹುದು. ಆದ್ದರಿಂದಲೇ ಕೆಲವು ತುಳು ಚಿತ್ರಗಳು

ದುಡ್ಡು ಕಳಕೊಳ್ಳುವ ದಾರಿಯಾಯಿತು. ಏನೇ ಮಾಡಿದರೂ ಕಲೆಗಾಗಿ ಎಂಬ ಅಚಲ ವಿಶ್ವಾಸ ಮಾತ್ರ ಅವರಲ್ಲಿತ್ತು.

ಟೇಲರ್‌ರ ಚಿತ್ರರಂಗದ ಅನುಭವ ಬಹುರೋಚಕವಾದುದು. ಮಂಗಳೂರಲ್ಲೇ ಮನೆಯಿದ್ದರೂ ಅಲ್ಲಿಗೆ ಹೋಗದೆ, ಹೋಟೆಲೊಂದರ ಕೋಣೆಯನ್ನು ತಿಂಗಳಾನುಗಟ್ಟಲೆ ಗೊತ್ತುಮಾಡಿ, ಅಲ್ಲೇ ಭದ್ರವಾಗಿ ಬೇರೂರಿ, ಚಿತ್ರಕಥೆ ಬರೆಯುತ್ತ, ವ್ಯವಹಾರ ಕುದುರಿಸುತ್ತ ಕಳೆದ ಕಾಲಗಳೆಷ್ಟೋ. ನಾಟಕ ಮಾಡುವಾಗ, 'ಬದುಕಿದ್ದೇ ನಾಟಕ ಮಾಡಲು' ಎಂಬಂತೆಯೂ ಚಿತ್ರ ತಯಾರಿಸುವಾಗ,'ಬದುಕಿದ್ದೇ ಚಿತ್ರ ತಯಾರಿಸಲು' ಎಂಬಂತೆಯೂ ಅವರು ಕಾಣಿಸುತ್ತಿದ್ದರು. ಅಷ್ಟೊಂದು ಏಕಾಗ್ರತೆ. 'ನೋಡಿ ಕಲಿ, ಮಾಡಿ ತಿಳಿ' - ಎಂಬುದು ಅವರ ಸಿನಿಮಾ ಬಾಳಿನ ಸೂತ್ರ. ಆದ್ದರಿಂದಲೇ ಚಿತ್ರರಂಗದಲ್ಲಿ ಅವರು ಏಕಕಾಲಕ್ಕೆ ಎಲ್ಲವೂ ಆದರು.

ಒಂದು ಕಾಲದ ಕನ್ನಡದ ಖ್ಯಾತ ನಟನಟಿಯರನೇಕರು ಟೇಲರ್‌ರ ಚಿತ್ರದಲ್ಲಿ ಅಭಿನಯಿಸಿದ್ದರು. ಮಿನುಗುತಾರೆ ಕಲ್ಪನಾರಿಂದ ಮೊದಲ್ಗೊಂಡು ಅನುಭವಿಗಳಾದ ನಟಿಯರೆಲ್ಲರೂ ಟೇಲರ್‌ರ ಅನುಭವ ಸಂಪತ್ತನ್ನು ಬಹಳವಾಗಿ ಮೆಚ್ಚಿಕೊಂಡಿದ್ದರು.

ಟೇಲರ್‌ರ ಕೆಲವಾರು ಚಿತ್ರಗಳು ಅವರ ನಾಟಕದ ಮೂಲದಿಂದಲೇ ಬಂದವುಗಳು. ನಾಟಕದ ಯಶಸ್ಸನ್ನು ಮಾನದಂಡವಾಗಿಟ್ಟುಕೊಂಡು ಅವನ್ನೂ ಬೆಳ್ಳಿತೆರೆಗೆ ತಂದಾಗ ಕೆಲವು ಯಶಸ್ವಿಯೂ ಆದುವು. 'ಬಾಡಾಯಿದ್ದ ಬಂಗಾರ್' ನಾಟಕವನ್ನು 'ಬಿಸತ್ತಿಬಾಬು' ಎಂಬ ಹೆಸರಿನ ಸಿನಿಮಾವನ್ನಾಗಿ ಪರಿವರ್ತಿಸಿ ಮಂಗಳೂರಿನ ಚಿತ್ರಮಂದಿರದಲ್ಲಿ ಎಪ್ಪತ್ತೇಳು ನಿರಂತರ ದಿನ ಪ್ರದರ್ಶಿಸಿದ್ದು ಪ್ರಾದೇಶಿಕ ಉಪಭಾಷೆಯೊಂದಕ್ಕೆ ಸಂಬಂಧಪಟ್ಟ ಹಾಗೆ ಒಂದು ದಾಖಲೆಯೆ. ಅಂತೆಯೆ 'ಸಾವಿರಡೊರ್ತಿ ಸಾವಿತ್ರಿ'ಯನ್ನು ಅವರ 'ಕಲ್ಡ್‌ದ ದೇವೆರ್' ನಾಟಕದಿಂದಲೂ 'ಭಾಗ್ಯವಂತೆದಿ'ಯನ್ನು ಕಂಡನೆ ಬುಡೆದಿ ನಾಟಕದಿಂದಲೂ ಪ್ರೇರೇಪಿತರಾಗಿ ಸಿದ್ಧಪಡಿಸಿದ್ದರು. ಭಾಗ್ಯವಂತೆದಿಯೂ ಸ್ವರ್ಣಮಹೋತ್ಸವವನ್ನು ಆಚರಿಸಿದೆ. ಯಾನ್ ಸನ್ಯಾಸಿ ಆಪೆ, ಕಾಸ್‌ದಾಯೆ ಕಂಡನೆ, ಏರ್‌ಮಲ್ತಿನ ತಪ್ಪು ಮುಂತಾದ ನಾಟಕಗಳು ಅವೇ ಹೆಸರಿನಿಂದ ಚಲನಚಿತ್ರಗಳಾದುವು. ನಾಟಕದ ಯಶಸ್ಸಿನ ಆಧಾರದ ಮೇಲೆ ಚಲನಚಿತ್ರಗಳೂ ಪ್ರಾದೇಶಿಕ ಪರಿಸರದಲ್ಲಿ ಹೆಸರು ಮಾಡಿದವು.

'ಬಿಸತ್ತಿ ಬಾಬು' ಸಿನಿಮಾವು ರಾಜ್ಯದ ಇತರ ಸಿನಿಮಾಗಳ ಜೊತೆ ಸ್ಪರ್ಧಿಸಿ ಮೂರನೆಯ ಪ್ರಶಸ್ತಿಯನ್ನೂ 'ಭಾಗ್ಯವಂತೆದಿ'ಯು ವಿಶೇಷ ಪ್ರಶಸ್ತಿಯನ್ನೂ ಪಡೆಯಿತು. ನಟರಾಗಿ, ನವಭಾರತ ತುಳುಕೂಟ ಸಂಸ್ಥೆಗಳ ವತಿಯಿಂದ ಕೊಡಲಾದ ಪ್ರಶಸ್ತಿಯು ಕೆ. ಎನ್. ಟೇಲರ್‌ರ 'ಯಾನ್ ಸನ್ಯಾಸಿ ಆಪೆ' ಚಿತ್ರದ ಕುಮಾರ್ ಪಾತ್ರದ ಅಭಿನಯಕ್ಕೆ ಸಂದಿತು.

ಟೇಲರ್‌ರು ತಾನೇ ದುಡ್ಡು ಹಾಕಿ ಮಾಡಿದ 'ಸಾವಿರಡೊರ್ತಿ ಸಾವಿತ್ರಿ'ಯು ಬೆಳ್ಳಿತೆರೆಯಲ್ಲಿ ಮೂಡುವ ಹೊತ್ತಿಗೆ ಎಮರ್ಜೆನ್ಸಿಯ(೧೯೭೬) ಕಾಲವಾಗಿತ್ತು. ಸಿನಿಮಾದ ಸೆನ್ಸಾರ್ ಮಂಡಳಿ ಬಹಳ ಬಿಗುವಾಗಿತ್ತು. ಅದರ ಪರಿಣಾಮವಾಗಿ ಟೇಲರ್‌ರ ಸಿನಿಮಾದ ರೆಕ್ಕೆಪುಕ್ಕಗಳಲ್ಲಿ ಹೊರಟುಹೋದವು. ಹಾರಲಾಗದ 'ಸಾವಿರಡೊರ್ತಿ ಸಾವಿತ್ರಿ' ಆರ್ಥಿಕವಾಗಿ ಕುಸಿದೇ ಹೋದಳು. ಹಿಂದೊಮ್ಮೆ ನಾಟಕವಾಡಿ ಸೋಲನುಭವಿಸಿ ರಥಬೀದಿಯಲ್ಲಿದ್ದ ಅಂಗಡಿಯನ್ನು ಮಾರಿ ಮದರಾಸಿಗೆ ಹೋಗಿ ಮತ್ತೆ ಬಂದು ಅದೇ ಅಂಗಡಿಯನ್ನು ಕೊಂಡು ಕೊಂಡಿದ್ದರೂ ಸಿನಿಮಾ ಅದನ್ನು ಮತ್ತೆ ಮಾರುವಂತೆ ಮಾಡಿತು. ಮನೆ ಮಠಗಳೂ ಸಾಲಗಾರರ ಪಾಲಾದುವು.

ಸೋಲುಗೆಲುವುಗಳು ಇಂಥ ಪಂಥಗಳಲ್ಲಿ ಇದ್ದದ್ದೆ. ನಾಟಕದಲ್ಲಾದರೆ ಅಂಥ ಸೋಲು ಬರುವ ಸಾಧ್ಯತೆ ಕಡಿಮೆ. ಸಿನಿಮಾ ಹಾಗಲ್ಲ. ಆದರೂ ಟೇಲರ್‌ರ ಜಾಣ್ಮೆ ಮೆಚ್ಚಬೇಕಾದದ್ದೆ. ನಾಲ್ಕೈದು ಲಕ್ಷ ಮಂದಿ ಮಾತ್ರ ಆಡುತ್ತಿದ್ದ ಭಾಷೆಯನ್ನು ಚಲನ ಚಿತ್ರದ ಮಾಧ್ಯಮವಾಗಿಟ್ಟುಕೊಂಡು ಸಿನಿಮಾ ಮಾಡುವುದಕ್ಕೆ ತಯಾರಕರ ಮಂದಿಯನ್ನು ಪ್ರೇರೇಪಿಸಿದ್ದಾಗಲೀ ಭಂಡವಾಳ ಹೂಡುವಂತೆ ಮಾಡಿದ್ದಾಗಲೀ ಅಸಾಮಾನ್ಯ ಕೆಲಸ. ಸಾಕಷ್ಟು ದುಡ್ಡು ಮಾಡದಿದ್ದರೂ ಛಲಬಿಡದೆ ಮತ್ತೊಂದು ಮಗುದೊಂದು ಸಿನಿಮಾ ಮಾಡುತ್ತಲೇ ಹೋದರು. ಒಂಬತ್ತು ತುಳು ಸಿನಿಮಾಗಳು ಪುಟ್ಟ ಭಾಷೆಯೊಂದರಿಂದ ಟೇಲರ್‌ರ ಮೂಲಕವೇ ಹೊರಟಿವೆ ಎನ್ನುವುದು ಮುಖ್ಯವಾದ ಮಾತು. ಚಿತ್ರಕತೆ, ಸಂಭಾಷಣೆ, ನಟನೆ ಎಲ್ಲದರಲ್ಲೂ ಅವರದೇ ಸಿಂಹಪಾಲು. ಮೇಲಾಗಿ ಈ ಕಾಲದ ಸೌಕರ್ಯಗಳೂ ಆಗ ಇರಲಿಲ್ಲ. ಈಗ ಇಷ್ಟೆಲ್ಲ ಸೌಕರ್ಯಗಳಿದ್ದೂ ಆರ್ಥಿಕ ಭದ್ರತೆಯಿದ್ದೂ ತುಳು ಚಿತ್ರತಯಾರಕರು ಮುಂದೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಅಷ್ಟರಲ್ಲೇ ಟೇಲರ್‌ರ ಕೆಲಸದ ತಾದಾತ್ಮ್ಯವನ್ನು ಗುರುತಿಸಬಹುದು. ಹಾಗೂ ಇಂದು ಯಾರೇ ತುಳು ಸಿನಿಮಾ ತಯಾರಿಸುವ ಧೈರ್ಯ ತಾಳಿದರೂ ಅವರು ಟೇಲರನ್ನೊಮ್ಮೆ ಮಾರ್ಗದರ್ಶೀ ಭಾವದಲ್ಲಿ ಸ್ಮರಿಸದೆ ಮುಂದಕ್ಕೆ ಹೋಗಲಾರರು.

## ಅರಸಿಬಂದ ಮನ್ನಣೆ

ನಾಟಕವೆಂಬುದು ಬಿತ್ತಿದ ಕೂಡಲೆ ಬೆಳೆಕೊಡುವ ಕೃಷಿಯಲ್ಲ. ಅನೇಕ ವರ್ಷಗಳ ರಂಗತಪಸ್ಸಿನ ಫಲವಾಗಿ ಟೇಲರ್ ಜನಮನ್ನಣೆಗೆ ಪಾತ್ರರಾಗುತ್ತ ಬಂದರು. 'ತಮ್ಮಲೆ ಅರ್‍ವತ್ತನ ಕೋಲ' ನಾಟಕವು ಟೇಲರನ್ನು ಜನಪ್ರಿಯತೆಯ ತುದಿಗೇರಿಸಿದಾಗ ಅನೇಕ ರಾಜಕೀಯ ಪಕ್ಷಗಳೂ ಅದರ ಬಗ್ಗೆ ಕುತೂಹಲ ತಾಳಿದವು. ನಾಟಕವನ್ನಾಡಿಸಿ ಧನಶೇಖರಣೆ ಮಾಡುವುದೂ ಸಾಧ್ಯವಿತ್ತು. 'ತಮ್ಮಲೆ ಅರುವತ್ತನ ಕೋಲ'ವೆಂಬ ಒಂದೇ ನಾಟಕವನ್ನು ಆ ಕಾಲದಲ್ಲಿ ಪಿ.ಎಸ್.ಪಿ., ಕಾಂಗ್ರೆಸ್,

ಜನಸಂಘ ಹಾಗೂ ಕಮ್ಯೂನಿಸ್ಟ್ ಪಕ್ಷಗಳು ಆಡಿಸಿದ್ದೊಂದು ವಿಶೇಷವೆ. ನಾಟಕದ ಜನಪ್ರಿಯತೆ ಪಕ್ಷಗಳನ್ನೂ ಮರುಳು ಮಾಡಿದ್ದು ಟೇಲರಿಗೆ ಪರೋಕ್ಷವಾಗಿ ದೊರೆತ ಪ್ರಶಸ್ತಿಯೆ.

೧೯೮೮ರಲ್ಲಿ ಗಲ್ಫ್‌ನಿಂದ ಕರೆಬಂದಾಗ ಶ್ರೀ ಗಣೇಶ ನಾಟಕ ಸಭಾ ಅಲ್ಲಿಗೆ ಹೋಗಿ 'ಕಂಡನಿ ಬುಡೆದಿ' ನಾಟಕ ಆಡಿದ್ದಷ್ಟೇ ಅಲ್ಲದೆ ಅಬುದಾಭಿಯ ತುಳು ಕಲಾಸಮಾಜದ ದಕ್ಷಿಣ ಕನ್ನಡಿಗರು ಟೇಲರ್‌ರನ್ನು ಹೃದಯಸ್ಪರ್ಶಿಯಾಗಿ ಸನ್ಮಾನಿಸಿತು. ಪೂರ್ಣಪ್ರಮಾಣದ ತುಳು ರಂಗತಂಡವೊಂದು ಅದೇ ಮೊದಲ ಬಾರಿಗೆ ವಿದೇಶ ಪ್ರವಾಸ ಕೈಗೊಂಡಿತ್ತು. ಟೇಲರ್‌ರ ಪಾಲಿಗೆ ಅದೊಂದು ಮರೆಯಲಾಗದ ದಾಖಲೆಯ ಅನುಭವ. ತಂಡದ ಎಲ್ಲ ಸದಸ್ಯರೂ ಅದನ್ನು ಕೃತಜ್ಞತೆಯಿಂದ ನೆನೆಯುತ್ತಾರೆ.

೧೯೬೫ರಷ್ಟು ಹಿಂದೆಯೇ ಆಗಿನ ಆರೋಗ್ಯ ಸಚಿವರಾಗಿದ್ದ ಡಾ. ನಾಗಪ್ಪ ಆಳ್ವರು ಟೇಲರನ್ನು ಸಾರ್ವಜನಿಕ ಸಮಾರಂಭದಲ್ಲಿ ಸನ್ಮಾನಿಸಿದ್ದರು. ಮದರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಪ್ರೊ| ಎಂ. ಮರಿಯಪ್ಪ ಭಟ್ಟರು ತಮಿಳುನಾಡಿನಲ್ಲಿರುವ ತುಳುವರ ಪರವಾಗಿ ಟೇಲರನ್ನು ಗೌರವಿಸಿದ್ದರು. ಖ್ಯಾತ ಹಿಂದಿ ಚಿತ್ರನಟ ಸಂಜೀವಕುಮಾರ್ (೧೯೭೨), ಡಾ. ರಾಜಕುಮಾರ್ (೧೯೭೨), ಡಾ. ಡಿ. ವೀರೇಂದ್ರ ಹೆಗ್ಗಡೆ (೧೯೭೨), ೧೯೮೨ರಲ್ಲಿ ಕರ್ನಾಟಕ ಸರಕಾರದ ವಾರ್ತಾ ಹಾಗೂ ಯುವಜನ ಇಲಾಖೆಯ ಸಚಿವರಾಗಿದ್ದ ಗಂಗಾಧರ ಗೌಡ, ೧೯೮೩ರಲ್ಲಿ ರಾಜ್ಯದ ಕ್ರೀಡಾ ಸಚಿವರಾಗಿದ್ದ ಡಾ. ಜೀವರಾಜ ಆಳ್ವ, ಪೇಜಾವರ ಶ್ರೀಗಳು, ಪ್ರಸಿದ್ಧ ರಂಗನಟಿ ಶ್ರೀಮತಿ ಬಿ. ಜಯಮ್ಮ (೧೯೮೫), ಮಹಾರಾಷ್ಟ್ರದ ಆರೋಗ್ಯ ಸಚಿವೆಯಾಗಿದ್ದ ಡಾ. ಲಲಿತಾರಾವ್ (೧೯೮೮) ಮುಂತಾದ ಅನೇಕ ಗಣ್ಯರು ಟೇಲರನ್ನು ಸಾರ್ವಜನಿಕವಾಗಿ ಸನ್ಮಾನಿಸಿದ್ದಾರೆ. ೧೯೯೨ರಲ್ಲಿ ದುಬಾಯಿಯ ತುಳುಕೂಟವು ಟೇಲರನ್ನು ವಿಶೇಷವಾಗಿ ಆಮಂತ್ರಿಸಿತ್ತು. ತುಳುರಂಗಭೂಮಿಯ ಶ್ರೇಷ್ಠ ಕಲಾವಿದನೆಂಬ ನೆಲೆಯಲ್ಲಿ ದುಬಾಯಿಗೆ ಹೋದ ಟೇಲರ್‌ರನ್ನು ಅಲ್ಲಿನ ತುಳುಕೂಟದ ಸದಸ್ಯರು ಅವರಿಗೆ 'ಕಲಾರತ್ನ' ಬಿರುದನ್ನಿತ್ತು ವಿಶೇಷ ರೀತಿಯಲ್ಲಿ ಗೌರವಿಸಿದ್ದಾರೆ. ಸಂಸತ್ಸದಸ್ಯರಾಗಿದ್ದ ಧನಂಜಯ ಕುಮಾರ್, ಆಸ್ಕರ್ ಫರ್ನಾಂಡಿಸ್, ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಎಂ. ವೀರಪ್ಪ ಮೊಯಿಲಿ (೧೯೯೩), ಗೋವಾದ ಮುಖ್ಯಮಂತ್ರಿಗಳಾಗಿದ್ದ ರವಿ. ಎಸ್. ನಾಯಕ್ - ಮುಂತಾದ ಅನೇಕ ಗೌರವಾನ್ವಿತ ವ್ಯಕ್ತಿಗಳಿಂದ, ಸಂಸ್ಥೆಗಳಿಂದ ಟೇಲರ್‌ರು ಸನ್ಮಾನಗಳನ್ನು, ಗೌರವ ಪ್ರಶಸ್ತಿಗಳನ್ನು ಪಡೆದು ಸಾರ್ಥಕ್ಯ ಕಂಡಿದ್ದಾರೆ.

೧೯೮೯ರಲ್ಲಿ ಕರ್ನಾಟಕ ನಾಟಕ ಅಕಾಡೆಮಿಯು ಮೊದಲ ಬಾರಿಗೆ ತುಳು ರಂಗಭೂಮಿಯನ್ನು ಗುರುತಿಸಿ, ಅದರ ಅಧ್ವರ್ಯುವಾಗಿ ನಾಲ್ಕು ದಶಕಗಳ ಕಾಲ ಮೆರೆದ

ಕೆ.ಎನ್. ಟೇಲರ್ ಅವರನ್ನು ರಾಜ್ಯಮಟ್ಟದ ಪ್ರಶಸ್ತಿ ನೀಡಿ ಗೌರವಿಸಿತು. ೧೯೯೪ರಲ್ಲಿ ಕರ್ನಾಟಕ ಸರಕಾರದ ರಾಜ್ಯೋತ್ಸವ ಪ್ರಶಸ್ತಿ, ೧೯೯೮ರಲ್ಲಿ ಕರ್ನಾಟಕ ತುಳುಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿಗಳಿಗೂ ಟೇಲರ್‌ರು ಭಾಜನರಾಗಿದ್ದಾರೆ.

## ಒಲಿದವರು - ಒಲಿಯದವರು

ತುಳುನಾಡಿನ ತುಳುವರು ಇರುವಲ್ಲೆಲ್ಲ ಟೇಲರ್ ಹೆಸರು ಚಾಲ್ತಿಯಲ್ಲಿದೆ. ಟೇಲರ್‌ರನ್ನು ವೇದಿಕೆಯಲ್ಲಿ ಕಾಣದಿರುವವರು ಈಗ ಸಾಕಷ್ಟು ಪ್ರಮಾಣದಲ್ಲಿ ಇರಬಹುದು. ಆದರೆ ಆ ಕಾಲದಲ್ಲಿ ಟೇಲರ್ ತುಳುವರ ನಡುವೆ ಮನೆಮಾತಾಗಿದ್ದರು. ಅದಕ್ಕೆ ಕಾರಣ ತುಳು ರಂಗಭೂಮಿಯಲ್ಲಿ ಹಾಗೂ ತುಳು ಚಲನಚಿತ್ರಗಳಲ್ಲಿ ಅವರು ಮಾಡಿದ ಅದ್ವಿತೀಯ ಸೇವೆ.

ತುಳುವರ ಮಧ್ಯದಲ್ಲಿ ಹೀಗೊಬ್ಬ ವ್ಯಕ್ತಿ ಉದಯಿಸದಿರುತ್ತಿದ್ದರೆ ಇಂದು ತುಳುವಿಗೆ ಈ ಪ್ರಮಾಣದಲ್ಲಿ ಬೆಳೆದು ನಿಲ್ಲುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ತುಳುವ ಸಂಸ್ಕೃತಿ, ತುಳುವ ಜಾನಪದ ಕಲೆಗಳು ಎಲ್ಲವೂ ಹೇರಳವಾಗಿದ್ದರೂ ಅದನ್ನು ಹೊರಗೆಡಹುವ, ರಂಗದ ಮೂಲಕ ಕರ್ನಾಟಕಕ್ಕೆ ಪರಿಚಯಿಸುವ ಪ್ರವೃತ್ತಿ ಪ್ರಾರಂಭವಾದದ್ದು ಟೇಲರ್‌ರಿಂದಲೆ. ಪುಟ್ಟದೊಂದು ಭಾಷೆಯಲ್ಲಿ ಇರುವ ಅಗಾಧ ಶಕ್ತಿಯನ್ನು ಕಾಲಕ್ರಮೇಣ ಹಲವರು ಸಂಶೋಧಕರು ಪ್ರಕಟಪಡಿಸಿದರು. ವಿಶ್ವವಿದ್ಯಾನಿಲಯ, ತುಳು ಅಕಾಡೆಮಿ, ಗೋವಿಂದ ಪೈ ಸಂಶೋಧನ ಕೇಂದ್ರಗಳ ಮೂಲಕ ಬಹಳಷ್ಟು ಕೆಲಸಗಳಾದುವು.

ಈ ಎಲ್ಲ ಕೆಲಸಗಳ ಮಧ್ಯದಲ್ಲಿ ತುಳುವರು ಮರೆಯಬಾರದ ವ್ಯಕ್ತಿ ಕೆ. ಎನ್. ಟೇಲರ್.

ಟೇಲರ್‌ರ ಸಾಹಸಗಳನ್ನು ಹುಚ್ಚು ಸಾಹಸವೆಂದೇ ಕರೆದು ಅನೇಕರು ಅವರಿಂದ ದೂರಹೋದರು. ದೂರ ಹೋದವರಿಗೆ ಟೇಲರ್‌ರ ದೂರದರ್ಶಿತ್ವದ ಮಹತ್ವ ಗೊತ್ತಿರಲಿಲ್ಲ. ಕೆಲವರಷ್ಟೇ ಅವರ ಹತ್ತಿರ ಉಳಿದರು. ಅವರಲ್ಲಿ ಚಿತ್ರಭಾರತಿ ಸಂಸ್ಥೆಯ ಮಾಲಕರಾದ ಟಿ. ಎಸ್. ಶ್ರೀನಿವಾಸರು ಪ್ರಮುಖರು. ಶ್ರೀನಿವಾಸ್ ಹಾಗೂ ಟೇಲರ್‌ರ ನಡುವೆ ಸುಮಾರು ಮೂವತ್ತು ವರ್ಷಗಳ ನಂಟು. ೧೯೭೦ರ ಕಾಲಕ್ಕೆ 'ಬಿಸತ್ತಿ ಬಾಬು' ಚಿತ್ರ ನಿರ್ಮಾಣವಾದಾಗ ಅದನ್ನು ವಿತರಿಸುವ ಧೈರ್ಯ ತೆಗೆದುಕೊಂಡ ಶ್ರೀನಿವಾಸರು 'ಸೋಲು ಬಂದರೆ ಬರಲಿ, 'ತುಳುವಪ್ಪೆ'ಗಾಗಿ ನನ್ನ ಕಿಂಚಿತ್ ಸೇವೆ ಎಂದು ತಿಳಿದುಕೊಳ್ಳುವೆ' ಎಂದುಕೊಂಡು ಟೇಲರ್‌ರ ಬಲಗೈಯಾಗಿ ನಿಂತರು. ಅಲ್ಲಿಂದ ಮೊದಲ್ಗೊಂಡು ಟೇಲರ್‌ರ ಎಲ್ಲ ಚಿತ್ರಗಳಿಗೂ ಅವರೇ ದುಡ್ಡು ಹಾಕಿ ವಿತರಿಸಿದರು. ಶ್ರೀನಿವಾಸರು ಹೇಳುವಂತೆ 'ನನಗೂ ಟೇಲರ್‌ರಿಗೂ ಮೂವತ್ತು ವರ್ಷಗಳ ನಂಟು. ಅವರನ್ನು ನಾನೂ ನನ್ನನ್ನು ಅವರೂ ಚೆನ್ನಾಗಿ ಅರಿತಿದ್ದೇವೆ. ಯಾರು ಏನೇ ಹೇಳಲಿ,

ನಮ್ಮ ಸಂಬಂಧಕ್ಕೆ ಅದಾವುದೂ ಬಾಧಕವಲ್ಲ.' ಇಂಥ ಗೆಳೆಯರನ್ನು ಟೇಲರ್ ಬಹಳವಾಗಿ ನೆನೆಯುತ್ತಾರೆ: 'ಕಷ್ಟಕಾಲದಲ್ಲಿ ಕೈ ನೀಡಿದಾಗಲೆಲ್ಲ ಶ್ರೀನಿವಾಸರು ಅಭಯ ಹಸ್ತ ಚಾಚಿದ್ದಾರೆ. ಹಾಗೆ ಹೇಳುವುದಕ್ಕೆ ನನಗೆ ಯಾವ ಸಂಕೋಚವೂ ಇಲ್ಲ. ಶ್ರೀನಿವಾಸರು ಚಲನಚಿತ್ರದ ಕುರಿತಷ್ಟೇ ನನ್ನ ಜೊತೆ ಸಹಕರಿಸಿದ್ದಲ್ಲ. ಅವರು ಶ್ರೀ ಗಣೇಶ ನಾಟಕ ಸಭಾದ ಬಹುದೊಡ್ಡ ಅಭಿಮಾನಿ ಕೂಡ.'

ಕೆಲವರು ಟೇಲರ್‌ರ ಮೇಲೆ ಅಪಾರ ಅಭಿಮಾನ ಉಳ್ಳವರಾಗಿ ಅವರನ್ನೇ ನೆಚ್ಚಿಕೊಂಡದ್ದೂ ಇದೆ. ಟೇಲರ್‌ರ ಎಲ್ಲ ಕೆಲಸಗಳಿಗೂ ಒದಗುತ್ತಿದ್ದವರು ಅವರ ತಂಡದ ಪ್ರಮುಖ ನಟರೂ ಆಗಿರುವ ಸೀತಾರಾಮ ಶೆಟ್ಟಿ. ಜವಾಬ್ದಾರಿಗಳನ್ನು ಅರಿತು ನಿಭಾಯಿಸುತ್ತಿದ್ದುದು ಕಾರಣವಾಗಿ ಟೇಲರ್ ಅವರ ಬಗ್ಗೆ ವಿಶ್ವಾಸದ ಮಾತುಗಳನ್ನಾಡುತ್ತಾರೆ.

"ಶ್ರೀ ಗಣೇಶ ನಾಟಕ ಸಭಾದಲ್ಲಿ ನಟರಾಗಿ, ಹಿಮ್ಮೇಳ ಕಲಾವಿದರಾಗಿ ಮೆರೆದವರು ಬಹಳಷ್ಟು ಮಂದಿ. ಕೆಲವರು ಗತಿಸಿ ಹೋಗಿದ್ದರೆ ಹಲವರು ವಿವಿಧ ಹುದ್ದೆಗಳಲ್ಲಿ ವಿರಾಜಮಾನರಾಗಿದ್ದಾರೆ. ಇನ್ನು ಕೆಲವರು ನಿವೃತ್ತ ಬದುಕನ್ನು ಸಾಗಿಸುತ್ತಿದ್ದಾರೆ. ಅವರೆಲ್ಲರ ಹೆಸರು ಹೇಳುವುದು ಆಗದ ಹೋಗದ ಕೆಲಸ. ಅವರನ್ನು ಸ್ಮರಿಸುವುದಷ್ಟೇ ನಾನು ಮಾಡಬಹುದಾದ ಕಾಯಕ." ಎನ್ನುತ್ತಾರೆ ಟೇಲರ್.

ಟೇಲರ್ ಮೊದಲಿನಿಂದಲೂ ತನ್ನ ತಾಯಿಯ ಆಶ್ರಯದಲ್ಲಿ ಬೆಳೆದವರು. ತನ್ನ ತಂಡ ಹೊರಡುವಾಗ, ಹಿಂದಿರುಗುವಾಗ ಸಂಭ್ರಮ ಪಡುತ್ತಿದ್ದ ಆಕೆ ರಾತ್ರಿ ದೂರದ ನಟ ನಟಿಯರನ್ನು ಒಂಟಿಯಾಗಿ ಹೋಗಗೊಡದೆ ಮನೆಯಲ್ಲೇ ಉಳಿಸಿಕೊಂಡು, ಮರುದಿನ ಮುಂಜಾನೆ ಕಾಫಿತಿಂಡಿಯ ಉಪಚಾರ ಮಾಡಿ, ಕಳುಹಿಸಿಕೊಡುತ್ತಿದ್ದರು.

ಟೇಲರ್‌ರು ನೆನೆಯುವ ಇನ್ನು ಕೆಲವರೆಂದರೆ ಚಿತ್ರ ನಿರ್ದೇಶಕರಾದ ಗೀತಪ್ರಿಯ, ದಿ| ಆರೂರು ಪಟ್ಟಾಭಿ, ದಿ| ಮಲ್ಪೆ ಮಧ್ವರಾಜ್, ದಿ| ಆನಂದಶೇಖರ್, ನಾರಾಯಣ ಪುತ್ರನ್, ಎಂ. ವೈ. ಕೋಲಾ - ಮೊದಲಾದವರು. ಪತ್ನಿ ಜಯಂತಿ ಅವರಿಗೆ ಗಂಡನ 'ಹುಚ್ಚ'ನ್ನು ತಡೆದುಕೊಳ್ಳುವ ಸಹನೆ ಇಲ್ಲದಿರುತ್ತಿದ್ದರೆ ಟೇಲರ್‌ರ ಸಂಸಾರಕ್ಕೆ ಗತಿಗೋತ್ರ ಇಲ್ಲವಾಗುತ್ತಿತ್ತು. ಈಗ ಮಕ್ಕಳೂ ಸ್ವತಂತ್ರ ಉದ್ಯೋಗ ನೋಡಿಕೊಳ್ಳುತ್ತ ನೆಮ್ಮದಿಯ ಬದುಕು ಸಾಗಿಸುತ್ತಿದ್ದಾರೆ. ತಂದೆಯ ಬಗ್ಗೆ ಹೆಮ್ಮೆ ಉಳ್ಳವರಾಗಿದ್ದಾರೆ. ಅರುವತ್ತೊಂದರ ಹರೆಯದ 'ಚಿರಯುವಕ' ಕೆ.ಎನ್. ಟೇಲರನ್ನು 'ತುಳುನಾಡಿನ ರಾಜಕುಮಾರ್' ಎಂದು ಅಭಿಮಾನಿಗಳು ಪ್ರೀತಿಯಿಂದ ಕರೆದರು. ಯಾರೊಬ್ಬನಿಗೆ ಸ್ವತಂತ್ರ ಅಸ್ತಿತ್ವವಿಲ್ಲದಾದಾಗ ಅನ್ಯತ್ರ ಹೆಸರುಗಳ ಸಹಕಾರ ಬೇಕು. ಟೇಲರ್‌ಗೆ ತುಳುನಾಡಿನಲ್ಲಿ ಸ್ವತಂತ್ರ ಅಸ್ತಿತ್ವ ಇದೆ.

ರಾಜಕುಮಾರ್‌ರದ್ದು ಕನ್ನಡ ನಾಡಿಗೇ ದೊಡ್ಡ ಹೆಸರು. ಅಂತೆಯೇ ಟೇಲರ್‌ರದ್ದು ತುಳುನಾಡಿಗೆ. ಆದ್ದರಿಂದಲೇ ಟೇಲರ್‌ನ್ನು ಯಾರಿಗೂ ಹೋಲಿಸದೆ 'ಟೇಲರ್' ಎಂದು ಕರೆದರೆ ಸಾಕು.

ಟೇಲರ್‌ರ ಸಾಧನೆಯನ್ನು ಸರಕಾರ ಗುರುತಿಸುವ ಸಾಧ್ಯತೆಗಳು ಕಡಿಮೆ. ಕರ್ನಾಟಕದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಂತಹ ಸಾಂಸ್ಕೃತಿಕ ವೇದಿಕೆಗಳು ಟೇಲರ್‌ರನ್ನು ಗುರುತಿಸುವ ಸಾಧ್ಯತೆಗಳು - ಭಾಷಾ ದೃಷ್ಟಿಕೋನದಿಂದಲಾಗಿ - ಕಡಿಮೆ. ವಿವಿಧ ಸಂಘ ಸಂಸ್ಥೆಗಳು ಇಲಾಖೆಯಿಂದ, ಅಕಾಡೆಮಿಯಿಂದ ಆರ್ಥಿಕ ಸಹಾಯ ಪಡೆದುಕೊಂಡಿದ್ದಾರೆ. ನಾಟಕ ಅಕಾಡೆಮಿ ಆರ್ಥಿಕವಾಗಿ ಹಿಂದುಳಿದ ಕಂಪೆನಿಗಳಿಗೆ ಒಂದೊಮ್ಮೆ ಧನಸಹಾಯವನ್ನೂ ನೀಡಿದೆ. ಟೇಲರ್‌ರ ಸಂಸ್ಥೆಗೂ ಅಂತಹ ಆಧಾರಗಳು ಬೇಕಿತ್ತು. ಆದರೆ ಅವರದು ಪುಟ್ಟದೊಂದು ಭಾಷೆಯ, ಪ್ರಾದೇಶಿಕತೆಯ ನಡುವೆ ಕಮರಿದ ಸಂಸ್ಥೆ. ಹಾಗೂ ರಾಜಧಾನಿಗಿಂತ ದೂರದಲ್ಲಿರುವುದರಿಂದ ಸಕಾಲಕ್ಕೆ ಸಂಬಂಧಪಟ್ಟವರನ್ನು ಸಂಪರ್ಕಿಸಿ, ಒತ್ತಡ ಹೇರಿ ಅಂತಹ ಸೌಲಭ್ಯಗಳನ್ನು ಪಡೆದುಕೊಳ್ಳುವ ಅವಕಾಶಗಳು ಕಡಿಮೆ. ಅಂತಹ ಒಳಸುಳಿವುಗಳನ್ನು ತಿಳಿದುಕೊಳ್ಳುವುದು ಕಷ್ಟ. 'ಅರೆಬರೆ ನಟರನೇಕರು ಸರಕಾರದ ಸವಲತ್ತು ಪಡೆದು ದೇಶವಿದೇಶ ಸುತ್ತುತ್ತಿದ್ದಾರೆ. ನಾಟಕಕ್ಕಾಗಿ ಬದುಕನ್ನೇ ತೇದ ನಮ್ಮಂತವರಿಗೆ ಅಂತಹ ಸವಲತ್ತು, ದೌಲತ್ತು ಎಲ್ಲಿಂದ ಬರಬೇಕು' ಎನ್ನುವಾಗ ಟೇಲರ್‌ರ ಮುಖದಲ್ಲಿ ವಿಷಾದದ ಛಾಯೆ ಮೂಡುತ್ತದೆ. ಹಾಗೆಂದು ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಅಕಾಡೆಮಿ ಪ್ರಶಸ್ತಿಗಳು ಸಿಕ್ಕಿಲ್ಲವೆಂದಲ್ಲ. ಅದು ಬಾಯಾರಿದವನಿಗೆ ಸಿಗುವ ತೊಟ್ಟು ತನ್ನೀರು.

೧೯೮೫ರ ನಂತರದ ದಿನಗಳಲ್ಲಿ ಟೇಲರ್‌ರ ನಾಟಕದ ಬಿರುಸು ತುಸು ಕಡಿಮೆಯಾಯಿತು. ಅದಕ್ಕೆ ಕಾರಣ ಇಲ್ಲದಿಲ್ಲ. ಸಿನಿಮಾದಿಂದ ಟೇಲರ್ ಕೀರ್ತಿ ಸಂಪಾದಿಸಿದ್ದಿದೆ. ಅಂತೆಯೇ ಸಾಕಷ್ಟು ಕಳೆದುಕೊಂಡಿದ್ದಾರೆ. 'ನಮ್ಮ ಭಾಗ್ಯ' ಸಿನಿಮಾವು ಪ್ರಮುಖ ಹಂತದ ಕೆಲಸಗಳನ್ನು ಮುಗಿಸಿ ಹೊರಬರಲಾರದೇ ಚಡಪಡಿಸತೊಡಗಿ ಹದಿನೈದು ವರ್ಷಗಳಾದುವು. ಅದರ ಹಿಂದೆ ನಡೆಸಿದ ನಿರಂತರ ಓಡಾಟ ಅವರ ರಂಗಭೂಮಿಯ ಬದುಕಿಗೆ ಮುಳುವಾಯಿತು. ಟೇಲರ್ 'ನಮ್ಮ ಭಾಗ್ಯ'ದ ಆಸೆಯನ್ನು ಇನ್ನೂ ಬಿಟ್ಟಿಲ್ಲ. ಅವರ ನಾಟಕಗಳು ವಾರ್ಷಿಕೋತ್ಸವದ ಸುಖವನ್ನಷ್ಟೆ ಮೆಲುಕುಹಾಕುತ್ತಿದೆ.

ಹೊಸ ನಾಟಕ ಸಿದ್ಧಪಡಿಸುವುದಕ್ಕೆ ಟೇಲರಿಗೆ ಮನಸ್ಸಿದೆ. ಮೂರು ನಾಲ್ಕು ಕಥಾವಸ್ತುಗಳನ್ನು ತಲೆಯಲ್ಲಿ ತುಂಬಿಕೊಂಡು ಅಕ್ಷರದ ರೂಪು ಕೊಡುವ ಮುಹೂರ್ತ ಕೂಡಿ ಬರದೆ ಒದ್ದಾಡುತ್ತಿದ್ದಾರೆ. ಸಿನಿಮಾ ಪೂರ್ತಿ ಬಿಟ್ಟು ನಾಟಕಕ್ಕೆ ಬರಲು ಸಾಧ್ಯವಾದರೆ ಟೇಲರ್ ಇನ್ನಷ್ಟು ವರ್ಷ ನಾಟಕ ಮಾಡಬಲ್ಲರು. ರಾಜ್ಯಾದ್ಯಂತ ಅವರ ಅಭಿಮಾನಿಗಳಿದ್ದಾರೆ, ಹೊಸನಾಟಕವನ್ನು ಜಾತಕಪಕ್ಷಿಯಂತೆ ಕಾಯುತ್ತಾ.

## ಅನುಬಂಧ

**ಕೆ. ಎನ್. ಟೇಲರ್ ಅವರು ರಚಿಸಿ, ನಟಿಸಿ, ನಿರ್ದೇಶಿಸಿದ ತುಳು ನಾಟಕಗಳು :**

೧. ಬೊಂಬಾಯಿ ಕಂಡನೆ (ಮುಂಬಯಿಯ ಗಂಡ)
೨. ಪುದರ್ ಕೇನಡೆ (ಹೆಸರು ಕೇಳದಿರಿ)
೩. ಡಾ. ಶಂಕರ್
೪. ತಮ್ಮಲೆ ಅರುವತ್ತನ ಕೋಲ (ಮಾವ - ಅಳಿಯಂದಿರ ಕೋಲ) - ಪ್ರಕಟಿತ
೫. ಏರ್ ಮಲ್ತಿನ ತಪ್ಪು? (ಯಾರು ಮಾಡಿದ ತಪ್ಪು?) - ಪ್ರಕಟಿತ
೬. ಶಾಂತಿ - ಪ್ರಕಟಿತ
೭. ಕಲ್ಲುದ ದೇವೆರ್ (ಕಲ್ಲಿನ ದೇವರು) - ಪ್ರಕಟಿತ
೮. ಯಾನ್ ಸನ್ಯಾಸಿ ಆಪೆ (ನಾನು ಸನ್ಯಾಸಿ ಆಗ್ತೇನೆ) - ಪ್ರಕಟಿತ
೯. ಕಾಸ್‌ದಾಯೆ ಕಂಡನೆ (ದುಡ್ಡಿನ ಗಂಡ) - ಪ್ರಕಟಿತ
೧೦. ಬಾಡಾಯಿದ ಬಂಗಾರ್ (ಬಾಡಿಗೆಯ ಬಂಗಾರ)
೧೧. ಕಂಡನೆ ಬುಡೆದಿ (ಗಂಡಹೆಂಡತಿ) - ಪ್ರಕಟಿತ
೧೨. ಇಂದ್ರನ ಆಸ್ತಿ - ಪ್ರಕಟಿತ
೧೩. ಕಲ್ಜಿಗದ ವಿಶ್ವಾಮಿತ್ರ ಮೇನಕ - ಪ್ರಕಟಿತ
೧೪. ಏರೆನ್ಲಾ ನಂಬೊಡ್ಚಿ (ಯಾರನ್ನೂ ನಂಬದಿರಿ)
೧೫. ದೇವೆರ್ ಕೊರ್ಪೆರ್ (ದೇವರು ಕೊಡುತ್ತಾರೆ) - ಪ್ರಕಟಿತ
೧೬. ಸಯ್‌ನಗಾಂಡಲಾ ಸತ್ಯಪನ್ಲೆ (ಸಾಯುವಾಗಾದ್ರೂ ಸತ್ಯಹೇಳಿ)
೧೭. ದಾಸುನ ಮದ್ಮೆ

**ಕೆ. ಎನ್. ಟೇಲರ್ ನಟಿಸಿದ ತುಳು ಚಲನಚಿತ್ರಗಳು :**

೧. ದಾರೆದ ಬುಡೆದಿ (ಚಿತ್ರಕಥೆ, ಸಂಭಾಷಣೆ, ನಟನೆ)
೨. ಪಗೆತ ಪುಗೆ (ಚಿತ್ರಕಥೆ, ಸಂಭಾಷಣೆ, ನಟನೆ)
೩. ಬಿಸತ್ತಿಬಾಬು (ಕಥೆ, ಚಿತ್ರಕಥೆ, ಸಂಭಾಷಣೆ, ನಟನೆ)
೪. ಯಾನ್ ಸನ್ಯಾಸಿ ಆಪೆ (ಕಥೆ, ಚಿತ್ರಕಥೆ, ಸಂಭಾಷಣೆ, ನಟನೆ)
೫. ಕಾಸ್‌ದಾಯೆ ಕಂಡನೆ (ಕಥೆ, ಚಿತ್ರಕಥೆ, ಸಂಭಾಷಣೆ, ನಟನೆ)
೬. ಏರ್ ಮಲ್ತಿನ ತಪ್ಪು (ಕಥೆ, ಚಿತ್ರಕಥೆ, ಸಂಭಾಷಣೆ, ನಟನೆ, ನಿರ್ದೇಶನ)
೭. ತುಳುನಾಡ ಸಿರಿ (ಚಿತ್ರಕಥೆ, ಸಂಭಾಷಣೆ, ನಟನೆ, ನಿರ್ದೇಶನ)
೮. ಸಾವಿರಡೊರ್ತಿ ಸಾವಿತ್ರಿ (ಕಥೆ, ಚಿತ್ರಕಥೆ, ಸಂಭಾಷಣೆ, ತಯಾರಿಕೆ)
೯. ಭಾಗ್ಯವಂತೆದಿ (ಕಥೆ, ಚಿತ್ರಕಥೆ, ಸಂಭಾಷಣೆ, ನಟನೆ)

## ಪ್ರಮುಖ ಪ್ರಶಸ್ತಿಗಳು :

೧. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ೧೯೮೯.

೨. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ - ೧೯೯೪

೩. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ - ೧೯೯೮

೪. 'ಬಿಸತ್ತಿ ಬಾಬು ' ಚಲನಚಿತ್ರಕ್ಕೆ ರಾಜ್ಯ ಸರಕಾರದ ಬಹುಮಾನ (೧೯೭೨-೭೩)

೫. 'ಭಾಗ್ಯವಂತೆದಿ' ಚಲನಚಿತ್ರಕ್ಕೆ ರಾಜ್ಯ ಸರಕಾರದ ವಿಶೇಷ ಪ್ರಶಸ್ತಿ (೧೯೮೧-೮೨)

೬. ಉತ್ತಮ ಚಿತ್ರಕತೆ, ಸಂಭಾಷಣೆ ಪ್ರಶಸ್ತಿ -ನವಭಾರತ ತುಳುಕೂಟದ ವತಿಯಿಂದ -೧೯೭೩.

೭. 'ಯಾನ್ ಸನ್ಯಾಸಿ ಆಪೆ' ಚಲನಚಿತ್ರದ ಕುಮಾರ್ ಪಾತ್ರ -ಉತ್ತಮ ನಟ ಪ್ರಶಸ್ತಿ - ನವಭಾರತ ತುಳುಕೂಟದ ವತಿಯಿಂದ - ೧೯೭೪.

## ಸಂದ ಸನ್ಮಾನಗಳು :

೧. ಮೈಸೂರು ಸರಕಾರದಲ್ಲಿ ಆರೋಗ್ಯ ಸಚಿವರಾಗಿದ್ದ (೧೯೬೫) ಡಾ. ನಾಗಪ್ಪ ಆಳ್ವ ಅವರಿಂದ.

೨. ಮದರಾಸು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಹಿರಿಯ ಸಂಶೋಧಕ ಪ್ರೊ| ಮರಿಯಪ್ಪ ಭಟ್ಟ ಅವರಿಂದ ೧೯೬೬ರಲ್ಲಿ.

೩. ಖ್ಯಾತ ಹಿಂದಿ ಚಲನಚಿತ್ರ ನಟ ಸಂಜೀವ್ ಕುಮಾರ್ ಅವರಿಂದ (೧೯೭೨)

೪. ಡಾ. ರಾಜಕುಮಾರ್ ಅವರಿಂದ (೧೯೭೨)

೫. ಡಾ. ಡಿ. ವೀರೇಂದ್ರ ಹೆಗ್ಗಡೆ, ಧರ್ಮಸ್ಥಳ - ಅವರಿಂದ (೧೯೭೨)

೬. ಕರ್ನಾಟಕ ಸರಕಾರದ ವಾರ್ತಾ ಹಾಗೂ ಯುವಜನ ಇಲಾಖೆಯ ಸಚಿವರಾಗಿದ್ದ ಶ್ರೀ ಗಂಗಾಧರ ಗೌಡ ಅವರಿಂದ - ೧೯೮೨.

೭. ರಾಜ್ಯ ಕ್ರೀಡಾ ಸಚಿವರಾಗಿದ್ದ ಡಾ. ಜೀವರಾಜ ಆಳ್ವ ಅವರಿಂದ - ೧೯೮೩

೮. ಶ್ರೀ ಪೇಜಾವರ ಮಠಾಧೀಶ ವಿಶ್ವೇಶತೀರ್ಥ ಪಾದಂಗಳವರಿಂದ - ೧೯೮೩

೯. ಪ್ರಸಿದ್ಧ ರಂಗನಟಿ ಶ್ರೀಮತಿ ಬಿ. ಜಯಮ್ಮ ಅವರಿಂದ - ೧೯೮೫.

೧೦. ಮಹಾರಾಷ್ಟ್ರದ ಆರೋಗ್ಯ ಸಚಿವೆಯಾಗಿದ್ದ ಡಾ. ಲಲಿತರಾವ್ ಅವರಿಂದ (೧೯೮೮)

೧೧. ಅಬುದಾಬಿಯ ತುಳುಕಲಾ ಸಮಾಜದ ವತಿಯಿಂದ - ೧೯೮೮.

೧೨. ದುಬಾಯ ತುಳುಕೂಟದ ವತಿಯಿಂದ - ೧೯೯೨.

೧೩. ಸಂಸತ್ಸದಸ್ಯರಾಗಿದ್ದ ಧನಂಜಯ ಕುಮಾರ್ ಅವರಿಂದ - ೧೯೯೦

೧೪. ಸಂಸತ್ಸದಸ್ಯರಾಗಿದ್ದ ಆಸ್ಕರ್ ಫರ್ನಾಂಡಿಸ್ ಅವರಿಂದ - ೧೯೮೭

೧೫. ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಎಂ. ವೀರಪ್ಪ ಮೊಯ್ಲಿ ಅವರಿಂದ - ೧೯೯೩.

೧೬. ಗೋವಾದ ಮುಖ್ಯಮಂತ್ರಿಗಳಾಗಿದ್ದ ರವಿ. ಎಸ್. ನಾಯಕ್ - ಅವರಿಂದ - ೧೯೯೯.

ಬದುಕು ವಿವರ :

| | |
|---|---|
| ಹೆಸರು | : ಕಡಂದಲೆ ನಾರಾಯಣ ಟೈಲರ್ |
| ರಂಗಭೂಮಿ ಕೊಟ್ಟ ಹೆಸರು | : ಕೆ. ಎನ್. ಟೇಲರ್ |
| ಜನನ | : ೧.೯. ೧೯೩೯ |
| ತಂದೆ | : ಕೆ. ಚಂದು |
| ತಾಯಿ | : ಮುತ್ತು |
| ವಿದ್ಯಾಭ್ಯಾಸ | : ಮೆಟ್ರಿಕ್ |
| ಪತ್ನಿ | : ಜಯಂತಿ |
| ಮಕ್ಕಳು | : ಮೂರು ಹೆಣ್ಣು, ಒಂದು ಗಂಡು. (ಮಮತ, ಪೂರ್ಣಿಮಾ, ಗಣೇಶ್, ಆಶಾ) |
| ಟೇಲರ್ ಅಂಗಡಿ ಪ್ರಾರಂಭ | : ೧೯೫೫ |
| ನಾಟಕಕ್ಕೆ ಪದಾರ್ಪಣೆ | : ೧೯೫೮ |
| ಶ್ರೀ ಗಣೇಶ ನಾಟಕ ಸಭಾ ಸ್ಥಾಪಿಸಿದ್ದು | : ೧೪ - ೪- ೧೯೫೮ |
| ಟೇಲರ್ ಅಂಗಡಿ ಮಾರಿದ್ದು | : ೧೯೬೧ |
| ಅದೇ ಅಂಗಡಿ ಮತ್ತೆ ಕೊಂಡದ್ದು | : ೧೯೬೩ |
| ಅದೇ ಅಂಗಡಿ ಮತ್ತೆ ಮಾರಿದ್ದು | : ೧೯೭೬ |
| ಸಿನಿಮಾರಂಗಕ್ಕೆ ಪದಾರ್ಪಣೆ | : ೧೯೭೦ |
| ಮೊದಲ ಚಲನಚಿತ್ರ | : ದಾರೆದ ಬುಡೆದಿ |

* * *




ಗೋವಾದ ಮುಖ್ಯಮಂತ್ರಿಯಾಗಿದ್ದ ಆರ್.ಎಸ್.ನಾಯಕ್, ಟೇಲರ್



ಮೂವತ್ತೈದನೇ ವಾರ್ಷಿಕೋತ್ಸವದಲ್ಲಿ ವೈ.ಎಸ್.ಹೆಗಡೆ, ಜೀವರಾಜ ಆಳ್ವ, ವೀರಪ್ಪ ಮೊಯ್ಲಿ, ಟೇಲರ್.



ದಾಸುನ ಮದ್ಮೆ ನಾಟಕದಲ್ಲಿ ಜಯಶೀಲ, ಟೇಲರ್, ಸೀತಾರಾಮ್ ಶೆಟ್ಟಿ



ನಾದಾರಿಂದ ಸನ್ಮಾನ



ಅಬುದಾಬಿಯಲ್ಲಿ ಕಲಾರತ್ನ ಬಿರುದು ನೀಡಿಕೆ



ನಿಜದ ಕಂಡನೆ - ಬುಡೆದಿ



ನಾಟಕದ ಕಂಡನೆ - ಬುಡೆದಿ




ಬೆಂಗಳೂರಲ್ಲಿ ಬೆಳ್ಳಿಹಬ್ಬ- ಟೇಲರ್, ಪೇಜಾವರ ಶ್ರೀಗಳು , ಅಶೋಕ್ ಕುಮಾರ್ ಶೆಟ್ಟಿ, ಜೀವರಾಜ ಆಳ್ವ.



ಬಾಡಾಯಿದ ಬಂಗಾರ್‌ನಲ್ಲಿ, ಲೀಲಾವತಿ, ಟೇಲರ್




ಕೆ.ಎನ್.ಟೇಲರ್ ತಂಡ ಕ್ಯಾಸೆಟ್‌ನ ಮುಖಪುಟದಲ್ಲಿ

# ಕರ್ನಾಟಕ ನಾಟಕ ಅಕಾಡೆಮಿ

## ಅಧ್ಯಕ್ಷರು ಮತ್ತು ಸದಸ್ಯರು

೧. ಶ್ರೀ ಸಿ. ಜಿ. ಕೃಷ್ಣಸ್ವಾಮಿ, ಬೆಂಗಳೂರು
ಅಧ್ಯಕ್ಷರು
೨. ಪ್ರೊ. ಸಿದ್ಧಲಿಂಗ ಪಟ್ಟಣಶೆಟ್ಟಿ, ಧಾರವಾಡ
೩. ಶ್ರೀ ಚೆನ್ನವೀರ ರಘಳಕಿ, ಬಿಜಾಪುರ
೪. ಶ್ರೀ ಪಿ. ಮುನಿರೆಡ್ಡಿ, ಮದ್ದೇರಿ
೫. ಶ್ರೀಮತಿ ಕೆ. ನಾಗರತ್ನಮ್ಮ, ಮರಿಯಮ್ಮನಹಳ್ಳಿ
೬. ಶ್ರೀ ಶಿವರಾಂ, ಮಂಡ್ಯ
೭. ಶ್ರೀ ಸಿ. ಎಂ. ನರಸಿಂಹಮೂರ್ತಿ, ಚಾಮರಾಜನಗರ
೮. ಶ್ರೀ ಶಂಕ್ರಯ್ಯ ಘಂಟಿ, ಗುಲ್ಬರ್ಗಾ
೯. ಶ್ರೀ ಎಸ್. ವಿ. ಪಾಟೀಲ, ಗುಂಡೂರು
೧೦. ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಧಾರವಾಡ
೧೧. ಶ್ರೀ ಚಿಂದೋಡಿ ಶಂಭುಲಿಂಗಪ್ಪ, ದಾವಣಗೆರೆ
೧೨. ಶ್ರೀ ಹೆಚ್. ಎಂ. ಮಯಾಬ್ರಹ್ಮಾಚಾರ್, ಬೆಂಗಳೂರು
೧೩. ಶ್ರೀ ಕೆ. ವಿ. ನಾಗರಾಜಮೂರ್ತಿ, ಬೆಂಗಳೂರು
೧೪. ಶ್ರೀ ಕಾಸರಗೋಡು ಚಿನ್ನಾ, ಕಾಸರಗೋಡು
೧೫. ಶ್ರೀ ಟಿ. ರಘು, ಬೆಂಗಳೂರು
೧೬. ಶ್ರೀ ಎಂ. ಸಂಪಂಗಿ, ಬೆಂಗಳೂರು
೧೭. ಶ್ರೀ ಎಚ್. ಎಸ್. ನೀಲಕಂಠ, ಬೆಂಗಳೂರು
೧೮. ಶ್ರೀಮತಿ ಎಸ್. ಮಾಲತಿ, ಸಾಗರ
೧೯. ಶ್ರೀ ಸಿ. ಕೆ. ಗುಂಡಣ್ಣ, ಬೆಂಗಳೂರು
೨೦. ಶ್ರೀಮತಿ ಪಂಕಜ ರವಿಶಂಕರ್, ಬೆಂಗಳೂರು
೨೧. ಶ್ರೀ ಕಾಗೋಡು ಅಣ್ಣಪ್ಪ, ಸಾಗರ
೨೨. ಶ್ರೀ ಎಚ್. ಎಸ್. ಉಮೇಶ್, ಮೈಸೂರು
೨೩. ಶ್ರೀ ಮಾ. ನರಸಿಂಹಮೂರ್ತಿ, ಬೆಂಗಳೂರು
೨೪. ಶ್ರೀ ಐ. ಕೆ. ಬೊಳುವಾರ್, ಪುತ್ತೂರು
೨೫. ಶ್ರೀ ಹೂಲಿ ಶೇಖರ್, ಅಂಬಿಕಾನಗರ
೨೬. ಶ್ರೀ ಬಿ. ಟಿ. ಮುನಿರಾಜಯ್ಯ
ರಿಜಿಸ್ಟ್ರಾರ್
೨೭. ಆರ್. ಎಸ್. ದಳವಾಯಿ
ಅರ್ಥಸದಸ್ಯರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ